# ಜನತಾವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಸೆಪ್ಟೆಂಬರ್ 15, 2020

ಸಂಪುಟ : 47 ಸಂಚಿಕೆ : 126 ☎ 254736 91642 99999 RNI No: 27369/75, KA/SK/CTA-275/2018-2020. O/P @ J.D. Circle P.O. ಪುಟ : 4 ರೂ : 3.00 www.janathavani.com janathavani@mac.com





## ಹಿಂದಿ ಹೇರಿಕೆ : ಕನ್ನಡ ಪರ ಸಂಘಟನೆಗಳ ಪ್ರತಿಭಟನೆ

ಹಿಂದಿ ಸಪ್ತಾಹ ಆಚರಣೆಯನ್ನು ಖಂಡಿಸಿ ಕನ್ನಡ ಚಳುವಳಿ ಕೇಂದ್ರ ಸಮಿತಿ ನೇತೃತ್ವದಲ್ಲಿ ಕನ್ನಡಪರ ಸಂಘಟನೆಗಳು ಸೋಮವಾರ ದಾವಣಗೆರೆಯಲ್ಲಿ ಪ್ರತಿಭಟನೆ ನಡೆಸಿದವು.

# ಬೆಂಬಲ ಬೆಲೆ ಮುಂದುವರಿಕೆ

## ಕೃಷಿ ವಲಯದ ಮೂರು ಮಸೂದೆಗಳ ಮಂಡನೆ ವೇಳೆ ಕೇಂದ್ರದ ಬದ್ಧತೆ

ನವದೆಹಲಿ, ಸೆ. 14 – ಕೃಷಿಕರ ಉತ್ಪನ್ನಗಳಿಗೆ ನೀಡಲಾಗುವ ಬೆಂಬಲ ಬೆಲೆ ಮುಂದುವರೆಯಲಿದೆ ಎಂದು ಬದ್ಧತೆ ವ್ಯಕ್ತಪಡಿಸಿರುವ ಕೇಂದ್ರ ಸರ್ಕಾರ, ಕೃಷಿ ವಲಯಕ್ಕೆ ಸಂಬಂಧಿಸಿದ ಮೂರು ಮಸೂದೆಗಳನ್ನು ಲೋಕಸಭೆಯಲ್ಲಿ ಮಂಡಿಸಿದೆ.



ಕನಿಷ್ಠ ಬೆಂಬಲ ಬೆಲೆ ಜಾರಿಯಲ್ಲಿತ್ತು, ಜಾರಿಯಲ್ಲಿದೆ ಹಾಗೂ ಮುಂದುವರೆಯಲಿದೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಲೋಕಸಭೆಯಲ್ಲಿ ತಿಳಿಸಿದ್ದಾರೆ.

ಮುಂಗಾರು ಅಧಿವೇಶನದ ಮೊದಲ ದಿನದಂದು ತೋಮರ್ ಅವರು ಕೃಷಿ ಉತ್ಪನ್ನಗಳ ಮಾರಾಟ ಹಾಗೂ ಕೃಷಿಕರ ಸಬಲೀಕರಣದ ಕುರಿತ ಮಸೂದೆ ಮಂಡಿಸಿದರು. ಗ್ರಾಹಕರ ವ್ಯವಹಾರಗಳ ಖಾತೆ ಅಧೀನ ಸಚಿವ ರಾವ್ ಸಾಹೇಬ್ ದಾನ್ವೇ ಅವರು ಅಗತ್ಯ ವಸ್ತುಗಳ ಕಾಯ್ದೆಗೆ ತಿದ್ದುಪಡಿ ತರುವ ಮಸೂದೆ ಮಂಡಿಸಿದರು. ಈಗಾಗಲೇ ಸರ್ಕಾರ ಈ ವಿಷಯಗಳ ಕುರಿತು ಸುಗ್ರೀವಾಜ್ಞೆ ಹೊರಡಿಸಿದೆ. ಅವುಗಳ ಜಾಗದಲ್ಲಿ ಶಾಸನ ಜಾರಿಗೆ ತರಲು ಮಸೂದೆಗಳನ್ನು ಮಂಡಿಸಲಾಗುತ್ತಿದೆ.

ನೂತನ ಕಾನೂನುಗಳಿಂದ ರೈತರಿಗೆ ಒದಗಿಸಲಾಗಿರುವ ಕನಿಷ್ಠ ಬೆಂಬಲ ಬೆಲೆಯ ನೆರವು ತಪ್ಪಲಿದೆ ಹಾಗೂ ರೈತರು ದೊಡ್ಡ ಕಂಪನಿಗಳ ಶೋಷಣೆಗೆ ಸಿಲುಕಲಿದ್ದಾರೆ ಎಂದು ಪ್ರತಿಪಕ್ಷಗಳು ಕಳವಳ ವ್ಯಕ್ತಪಡಿಸಿವೆ.

ಈ ಶಾಸನಗಳ ಮೂಲಕ ಸಂವಿಧಾನಾತ್ಮಕ ಒಕ್ಕೂಟ ವ್ಯವಸ್ಥೆಯ ಮೇಲೆ ನೇರ ಪ್ರಹಾರ ನಡೆಸಲಾಗುತ್ತಿದೆ ಎಂದು ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕರಾಗಿರುವ ಅಧೀರ್ ರಂಜನ್ ಚೌಧರಿ ಆರೋಪಿಸಿದರು.

ಇದಕ್ಕೂ ಮುಂಚೆ ಟ್ವೀಟ್ ಮಾಡಿದ್ದ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ, ರೈತರು ಹಾಗೂ ಕೃಷಿ ಕಾರ್ಮಿಕರ ಮೇಲೆ ಸುಗ್ರೀವಾಜ್ಞೆಗಳ ಮೂಲಕ ಮಾರಣಾಂತಿಕ ದಾಳಿ ನಡೆಸಲಾಗಿದೆ ಎಂದು ಹೇಳಿದ್ದರು.

ಆದರೆ ಆರೋಪಗಳನ್ನು ತಳ್ಳಿ ಹಾಕಿರುವ ಸಚಿವ ತೋಮರ್, ಶಾಸನಗಳಿಂದಾಗಿ ರೈತರ ಇಳುವರಿಗಳಿಗೆ ಉತ್ತೇಜನಾತ್ಮಕ ಬೆಲೆ ಸಿಗಲಿದೆ. ಇದರ ಜೊತೆಗೆ ಖಾಸಗಿ ಹೂಡಿಕೆ ಹಾಗೂ ತಂತ್ರಜ್ಞಾನವೂ ಲಭ್ಯವಾಗಲಿದೆ ಎಂದಿದ್ದಾರೆ.

ನೂತನ ಕಾನೂನುಗಳಿಂದ ಕೃಷಿ ಉತ್ಪನ್ನಗಳಿಗೆ ತಡೆ ರಹಿತ ಮಾರುಕಟ್ಟೆ ಸಿಗಲಿದೆ. ಇದರಿಂದಾಗಿ ರೈತರು ಸಶಕ್ತಗೊಂಡು ತಮಗೆ ಸೂಕ್ತವೆನಿಸಿದ ಹೂಡಿಕೆದಾರರ ಜೊತೆ ವ್ಯವಹರಿಸ ಬಹುದಾಗಿದೆ ಎಂದು ಸಚಿವರು ಹೇಳಿದ್ದಾರೆ.

ದೇಶದ ರೈತರ ಕಲ್ಯಾಣಕ್ಕಾಗಿ ಸರ್ಕಾರ ಹಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಾ ಬರುತ್ತಿದೆ. ಅದರ ಮುಂದುವರಿದ ಭಾಗವಾಗಿ ಶಾಸನಗಳನ್ನು ರೂಪಿಸಲಾಗುತ್ತಿದೆ ಎಂದವರು ಹೇಳಿದ್ದಾರೆ.

ಎರಡು ಹೆಕ್ಟೇರ್‌ಗೂ (3ನೇ ಪುಟಕ್ಕೆ)

## ದೇಶಾದ್ಯಂತ 'ಕನ್ನಡ ದಿನ' ಆಚರಿಸಲು ಕೇಂದ್ರಕ್ಕೆ ಹೆಚ್ಡಿಕೆ ಆಗ್ರಹ

ಬೆಂಗಳೂರು, ಸೆ. 14- ನವೆಂಬರ್ 1 ಅನ್ನು ದೇಶದಾದ್ಯಂತ ಕನ್ನಡ ದಿನವಾಗಿ ಆಚರಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದ್ದಾರೆ.



ಈ ಸಂಬಂಧ ಟ್ವೀಟ್ ಮಾಡಿರುವ ಅವರು, ಅನ್ಯ ಭಾಷಿಕರಿಗೆ ನಿರರ್ಥಕವಾಗಿರುವ ಹಿಂದಿ ದಿವಸವನ್ನು ಆಚರಿಸುವುದೇ ಆದರೆ, ಹಿಂದಿಯೊಂದಿಗೆ ಅಧಿಕೃತ ಭಾಷೆಗಳೆನಿಸಿರುವ ಕನ್ನಡವೂ ಸೇರಿದಂತೆ, ಎಲ್ಲ ಭಾಷೆಗಳ ದಿನವನ್ನು ಕೇಂದ್ರ ಸರ್ಕಾರವೇ ದೇಶದಾದ್ಯಂತ ಆಚರಣೆ ಮಾಡಬೇಕು. ಇದಕ್ಕಾಗಿ ಪ್ರತ್ಯೇಕ ದಿನವನ್ನೂ ಘೋಷಣೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ವಿವಿಧ ಭಾಷೆ, ವಿಭಿನ್ನ ಸಂಸ್ಕೃತಿ, ಪರಂಪರೆಗಳನ್ನು ಒಡಲಲ್ಲಿಟ್ಟುಕೊಂಡ ಭಾರತದಲ್ಲಿ, ಕನ್ನಡಿಗರೂ ಸೇರಿದಂತೆ, ಅನ್ಯ ಭಾಷಿಕರ ಮೇಲೆ ಹಿಂದಿಯನ್ನು ಬಲವಂತವಾಗಿ ಹಲವು ಮಾರ್ಗಗಳ ಮೂಲಕ ಹೇರಲಾಗುತ್ತಿದೆ. ಇಂದಿನ ಹಿಂದಿ ದಿವಸ್ ಕೂಡ ಅಂಥದ್ದೇ ಅಪಮಾರ್ಗ. ಭಾಷಾ ಅಹಂಕಾರದ ಸಂಕೇತವಾದ ಹಿಂದಿ ದಿವಸಕ್ಕೆ ಸ್ವಾಭಿಮಾನಿ ಕನ್ನಡಿಗರ ಪ್ರಬಲ ವಿರೋಧವಿದೆ ಎಂದಿದ್ದಾರೆ.

ಹಿಂದಿ ರಾಷ್ಟ್ರಭಾಷೆಯಲ್ಲ. ರಾಷ್ಟ್ರಭಾಷೆ ಎಂಬ ಕಲ್ಪನೆ ಸಂವಿಧಾನದಲ್ಲಿಲ್ಲ. ಆದರೂ ಹಿಂದಿಯನ್ನು ರಾಷ್ಟ್ರಭಾಷೆ ಎಂದು ಬಿಂಬಿಸುವ, ಅದರಲ್ಲಿ ರಾಜಕೀಯ ಮಾಡುವ ಪ್ರಯತ್ನ ಹಿಂದಿನಿಂದಲೂ ನಡೆದೇ ಬಂದಿದೆ. ಅದು ಈಗ ವಿಪರೀತಕ್ಕೆ ಹೋಗಿದೆ. ದೇಶದ ಇತರೆ ಭಾಷಿಕರು ಇಂಥ ಪ್ರಯತ್ನಗಳ ವಿರುದ್ಧ ದಂಗೆ ಏಳುವುದಕ್ಕೂ ಮೊದಲು ಹಿಂದಿ ಹೇರಿಕೆ ನಿಲ್ಲಬೇಕು ಎಂದು ಹೇಳಿದ್ದಾರೆ.

ಹಿಂದಿ ಹೇರಿಕೆಗೆ ಕಲಿಕೆ ನೆಪ ನೀಡಲಾಗುತ್ತಿದೆ. ಕಲಿಕೆ ಎಂದಿಗೂ ಆಯ್ಕೆಯೇ ಹೊರತು (3ನೇ ಪುಟಕ್ಕೆ)

## ಸಹಕಾರಿ ಬ್ಯಾಂಕುಗಳ ಬದಲಾವಣೆ ಮಸೂದೆ ಮಂಡನೆ

ನವದೆಹಲಿ, ಸೆ. 14 – ಸಹಕಾರಿ ಬ್ಯಾಂಕುಗಳನ್ನು ಖಾಸಗಿ ಬ್ಯಾಂಕಿಂಗ್ ರೀತಿಯಲ್ಲಿ ಮಾರ್ಪಡಿಸುವ ಬ್ಯಾಂಕಿಂಗ್ ನಿಯಂತ್ರಣ (ತಿದ್ದುಪಡಿ) ಮಸೂದೆಯನ್ನು ಕೇಂದ್ರ ಸರ್ಕಾರ ಲೋಕಸಭೆಯಲ್ಲಿ ಮಂಡಿಸಿದೆ.

ಕಾಂಗ್ರೆಸ್ ಸಂಸದರಾದ ಶಶಿ ಥರೂರ್ ಹಾಗೂ ತೃಣಮೂಲ ಕಾಂಗ್ರೆಸ್‌ನ ಸೌಗತ ರಾಯ್ ಸೇರಿದಂತೆ ಹಲವಾರು ಸದಸ್ಯರು ಮಸೂದೆಗೆ ವಿರೋಧಿಸಿದ್ದು, ಇದು ರಾಜ್ಯಗಳ ಹಕ್ಕುಗಳನ್ನು ಉಲ್ಲಂಘಿಸಿದಂತೆ ಎಂದಿದ್ದಾರೆ.

ಆರೋಪವನ್ನು ತಳ್ಳಿ ಹಾಕಿರುವ ಹಣಕಾಸು ಸಚಿವ ನಿರ್ಮಲಾ ಸೀತಾರಾಮನ್, ರಾಜ್ಯ ಸಹಕಾರಿ ಕಾಯ್ದೆಗಳನ್ನು ಬದಲಿಸುತ್ತಿಲ್ಲ. ಬ್ಯಾಂಕುಗಳಿಗೆ ಅನ್ವಯಿಸುವ ನಿಯಮಗಳನ್ನೇ ಸಹಕಾರಿ ಬ್ಯಾಂಕುಗಳಿಗೂ ಅನ್ವಯಿಸಲಾಗುತ್ತದೆ ಎಂದಿದ್ದಾರೆ.

ಬ್ಯಾಂಕಿಂಗ್ ವಿಷಯಗಳನ್ನು ವ್ಯವಹರಿಸುವ ಸಹಕಾರಿ ಬ್ಯಾಂಕುಗಳಿಗೆ ಈ ನಿಯಮಗಳನ್ನು ಅನ್ವಯಿಸಲಾಗುತ್ತಿದೆ. 277 ನಗರ ಸಹಕಾರಿ ಬ್ಯಾಂಕುಗಳು ನಷ್ಟದಲ್ಲಿವೆ ಎಂದು (3ನೇ ಪುಟಕ್ಕೆ)

## ಸೆ.21ರಿಂದ ಶಾಲೆಗಳು ಆರಂಭ

ಬೆಂಗಳೂರು, ಸೆ. 14- ಶಾಲಾ-ಕಾಲೇಜುಗಳನ್ನು ಸೆಪ್ಟೆಂಬರ್ 21 ರಿಂದ ಪುನರಾರಂಭವಾಗುವ ಸಾಧ್ಯತೆ ಇದೆ.



ಕೊರೊನಾ ಹಿನ್ನೆಲೆಯಲ್ಲಿ ಕಳೆದ ನಾಲ್ಕು ತಿಂಗಳಿನಿಂದ ಶಾಲಾ, ಕಾಲೇಜುಗಳನ್ನು ಆರಂಭಿಸಿರಲಿಲ್ಲ. ಕೇಂದ್ರದ ಮಾರ್ಗಸೂಚಿಯನ್ನು ಆಧಾರವಾಗಿಟ್ಟುಕೊಂಡು ರಾಜ್ಯ ಸರ್ಕಾರ ಹಂತ ಹಂತವಾಗಿ ಶಾಲೆಗಳನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

1 ರಿಂದ 8ನೇ ತರಗತಿವರೆಗೆ ಶಾಲೆಗಳನ್ನು ತೆರೆಯುವ ಬಗ್ಗೆ ಸರ್ಕಾರ ಇನ್ನೂ ತೀರ್ಮಾನ ಕೈಗೊಂಡಿಲ್ಲ. ಆದರೆ 9 ರಿಂದ 12ನೇ ತರಗತಿವರೆಗೆ ಶಾಲೆಗಳು ಸೆಪ್ಟೆಂಬರ್ 21 ರಿಂದಲೇ ಆರಂಭವಾಗಲಿವೆ.

ಪುನರಾರಂಭಗೊಂಡರೂ, ತರಗತಿಗಳು ಯಾವಾಗ, ಎಂದಿನಿಂದ ಆರಂಭಿಸಬೇಕೆಂಬುದರ ಬಗ್ಗೆ ಸರ್ಕಾರ ಶೀಘ್ರದಲ್ಲೇ ಮತ್ತೊಂದು ಮಾರ್ಗಸೂಚಿಯನ್ನು ಪ್ರಕಟಿಸಲಿದೆ.

ಪದವಿ ಮತ್ತು ಇನ್ನಿತರೆ ಉನ್ನತ ಶಿಕ್ಷಣ ಕಾಲೇಜುಗಳು ಅಕ್ಟೋಬರ್ 1 ರಿಂದ ಪುನರಾರಂಭವಾಗಲಿದ್ದು, ಈಗಾಗಲೇ ಅಂದರೆ ಕಳೆದ ಸೆಪ್ಟೆಂಬರ್ 1 ರಿಂದಲೇ ಈ ವಿದ್ಯಾರ್ಥಿಗಳಿಗೆ ಆನ್‌ಲೈನ್ ಶಿಕ್ಷಣ ಆರಂಭವಾಗಿದೆ.

ಸರ್ಕಾರಿ ಶಾಲೆಯ 1 ರಿಂದ 10ನೇ ತರಗತಿ ಮಕ್ಕಳಿಗೆ ಉಚಿತವಾಗಿ ಪಠ್ಯಪುಸ್ತಕಗಳನ್ನು ಮಕ್ಕಳ ಮನೆ ಬಾಗಿಲಿಗೆ ತಲುಪಿಸಲಾಗಿದೆ. ತರಗತಿಗಳು ಎಂದಿನಿಂದ ಆರಂಭವಾಗಬೇಕು ಎಂಬುದನ್ನು ಮಾರ್ಗಸೂಚಿ ಪ್ರಕಟವಾಗುವ ಸಂದರ್ಭದಲ್ಲೇ ಶೇ. 40 ರಷ್ಟು ಪಠ್ಯಕ್ರಮ ಕಡಿತಗೊಳಿಸಿ, ಉಳಿದ ಪಠ್ಯದ ಬಗ್ಗೆ (3ನೇ ಪುಟಕ್ಕೆ)

## ಈರುಳ್ಳಿ ರಫ್ತಿನ ಮೇಲೆ ನಿಷೇಧ



ಮುಂಬೈ, ಸೆ. 14 – ಈರುಳ್ಳಿ ರಫ್ತಿನ ಮೇಲೆ ಕೇಂದ್ರ ಸರ್ಕಾರ ನಿಷೇಧ ಹೇರಿದೆ. ದಕ್ಷಿಣ ರಾಜ್ಯಗಳಲ್ಲಿ ವ್ಯಾಪಕ ಮಳೆಯಾ ಗುತ್ತಿರುವ ಹಿನ್ನೆಲೆಯಲ್ಲಿ ಈರುಳ್ಳಿ ಬೆಲೆ ಏರುಮುಖ ವಾಗುತ್ತಿರುವಂತೆಯೇ ಈ ಕ್ರಮ ತೆಗೆದುಕೊಳ್ಳಲಾಗಿದೆ.

ಎಲ್ಲಾ ರೀತಿಯ ಈರುಳ್ಳಿಗಳ ರಫ್ತಿನ ಮೇಲೆ (3ನೇ ಪುಟಕ್ಕೆ)

## ಸಲಿಂಗ ವಿವಾಹಕ್ಕೆ ಕಾನೂನು, ಸಮಾಜದಲ್ಲಿ ಮಾನ್ಯತೆ ಇಲ್ಲ : ಕೇಂದ್ರ

ನವದೆಹಲಿ, ಸೆ. 14 – ಸಲಿಂಗ ಮದುವೆಗೆ ಕಾನೂನಿನಲ್ಲಿ, ಕಾನೂನು ವ್ಯವಸ್ಥೆಯಲ್ಲಿ, ಸಮಾಜದಲ್ಲಿ ಹಾಗೂ ನಮ್ಮ ಮೌಲ್ಯಗಳಲ್ಲಿ ಮಾನ್ಯತೆ ಇಲ್ಲ ಎಂದು ಹೇಳಿರುವ ಕೇಂದ್ರ ಸರ್ಕಾರ, ಇಂಥದಕ್ಕೆ ಅವಕಾಶವಿಲ್ಲ ಎಂದು ತಿಳಿಸಿದೆ.

ಸಲಿಂಗ ಮದುವೆಗೆ ಹಿಂದೂ ವಿವಾಹ ಕಾಯ್ದೆ ಹಾಗೂ ವಿಶೇಷ ವಿವಾಹ ಕಾಯ್ದೆಯಲ್ಲಿ ಅವಕಾಶ ನೀಡಬೇಕು ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಾಗಿದೆ. ಈ ಬಗ್ಗೆ ವಿಚಾರಣೆ ನಡೆಸುತ್ತಿರುವ ಮುಖ್ಯ ನ್ಯಾಯಮೂರ್ತಿ ಡಿ.ಎನ್. ಪಟೇಲ್ ಹಾಗೂ ನ್ಯಾಯಮೂರ್ತಿ ಪ್ರತೀಕ್ಷ ಜಲನ್ ಅವರನ್ನು ಒಳಗೊಂಡ ಪೀಠದ ಎದುರು ಸಾಲಿಸಿಟರ್ ಜನರಲ್ ತುಶಾರ್ ಮೆಹ್ತಾ ಅವರು ಈ ನಿಲುವು ತಿಳಿಸಿದ್ದಾರೆ.

ಎರಡು ಕಾರಣಗಳಿಗಾಗಿ ಈ ಅರ್ಜಿ ಸ್ವೀಕಾರಾರ್ಹವಲ್ಲ. ಮೊದಲನೆಯಾಗಿ ನ್ಯಾಯಾಲಯ ಶಾಸನ ರೂಪಿಸಬೇಕೆಂದು ಈ (3ನೇ ಪುಟಕ್ಕೆ)

## ವೇತನ ಕಡಿತ : ಮಸೂದೆ ಮಂಡನೆ

ನವದೆಹಲಿ, ಸೆ. 14 – ಕೊರೊನಾದಿಂದ ಉಂಟಾಗಿರುವ ತುರ್ತು ಸ್ಥಿತಿಯನ್ನು ನಿಭಾಯಿಸಲು ಸಂಸದರ ವೇತನವನ್ನು ವರ್ಷದವರೆಗೆ ಶೇ.30ರಷ್ಟು ಕಡಿತಗೊಳಿಸುವ ಮಸೂದೆಯನ್ನು ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಷಿ ಅವರು ಲೋಕಸಭೆಯಲ್ಲಿ ಮಂಡಿಸಿದ್ದಾರೆ.

ಏಪ್ರಿಲ್ 6ರಂದು ಈ ಕುರಿತ ಸುಗ್ರೀವಾಜ್ಞೆಗೆ ಸಂಪುಟ ಒಪ್ಪಿಗೆ ನೀಡಿತ್ತು. ಅದನ್ನು ಏಪ್ರಿಲ್ 7ರಂದು ಜಾರಿಗೆ ತರಲಾಗಿತ್ತು.

## ಉಸ್ತುವಾರಿ ಸಚಿವ ಭೈರತಿ ಬಸವರಾಜ್‌ಗೆ ಕೊರೊನಾ



ಬೆಂಗಳೂರು, ಸೆ. 14 – ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ನಗರಾಭಿವೃದ್ಧಿ ಸಚಿವ ಭೈರತಿ ಬಸವರಾಜ್ ಅವರಿಗೆ ಕೊರೊನಾ ಸೋಂಕು ಬಂದಿದೆ.

ನನಗೆ ಕೊರೊನಾ ಸೋಂಕು ಇರುವುದು ಖಚಿತವಾಗಿದೆ. ಯಾವುದೇ ಆರೋಗ್ಯ ಸಮಸ್ಯೆಗಳಿಲ್ಲ ಎಂದು ಬಸವರಾಜ್ ಅವರು ಟ್ವೀಟ್ ಮಾಡಿದ್ದಾರೆ.

ವೈದ್ಯರ ಸಲಹೆಯಂತೆ ನಾನು ಆಸ್ಪತ್ರೆಗೆ ದಾಖಲಾಗಿದ್ದೇನೆ ಮತ್ತು ಚಿಕಿತ್ಸೆ (3ನೇ ಪುಟಕ್ಕೆ)

## ಹೋಮಿಯೋಪತಿ ಔಷಧಿ ಮಸೂದೆಗೆ ಒಪ್ಪಿಗೆ

ನವದೆಹಲಿ, ಸೆ. 14 – ಸಮರ್ಪಕ ಹಾಗೂ ಉನ್ನತ ಗುಣಮಟ್ಟದ ಹೋಮಿಯೋಪತಿ ಔಷಧಿ ಪೂರೈಸುವ ಹಾಗೂ ಕಡಿಮೆ ವೆಚ್ಚದಲ್ಲಿ ವೈದ್ಯಕೀಯ ಶಿಕ್ಷಣ ನೀಡುವ ವ್ಯವಸ್ಥೆ ಕುರಿತಾದ ಎರಡು ಮಸೂದೆಗಳಿಗೆ ಸಂಸತ್ತು ಒಪ್ಪಿಗೆ ನೀಡಿದೆ.

ಹೋಮಿಯೋಪತಿ ರಾಷ್ಟ್ರೀಯ ಆಯೋಗದ ಮಸೂದೆ ಹಾಗೂ ಭಾರತೀಯ ವೈದ್ಯಕೀಯ ವ್ಯವಸ್ಥೆ ಕುರಿತ ರಾಷ್ಟ್ರೀಯ ಆಯೋಗ ಮಸೂದೆಗಳಿಗೆ ಲೋಕಸಭೆ ಒಪ್ಪಿಗೆ ನೀಡಿದೆ. ಈ ಮಸೂದೆಗಳಿಗೆ ರಾಜ್ಯಸಭೆ ಈಗಾಗಲೇ ಒಪ್ಪಿಗೆ ನೀಡಿದೆ. ಹೀಗಾಗಿ ಮಸೂದೆಗಳಿಗೆ ಸಂಸತ್ತಿನ (3ನೇ ಪುಟಕ್ಕೆ)

## ಹಿರಿಯ ಮುತ್ಸದ್ಧಿ ಸಿದ್ದಬಸಪ್ಪ ಇನ್ನಿಲ್ಲ



ಮಲೇಬೆನ್ನೂರು, ಸೆ.14- ಇಲ್ಲಿನ ಹಿರಿಯ ಮುತ್ಸದ್ಧಿ, ಧಾರ್ಮಿಕ ಮುಖಂಡ ಡಾ. ಕೆ.ಪಿ.ಸಿದ್ದಬಸಪ್ಪ ಅವರು ಇಂದು ಮಧ್ಯಾಹ್ನ 3 ಗಂಟೆಗೆ ನಿಧನರಾದರು.

ಮೃತರಿಗೆ 96 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯ ಕ್ರಿಯೆಯು (3ನೇ ಪುಟಕ್ಕೆ)


## ಮಲೇಬೆನ್ನೂರು ಪಟ್ಟಣದ ಡಾ. ಕೆ.ಪಿ. ಸಿದ್ದಬಸಪ್ಪ ನಿಧನ



ಮಲೇಬೆನ್ನೂರಿನ ಮಾಜಿ ಛೇರ್ಮನ್, ಹರಿಹರ ತಾ.ಬೋರ್ಡ್ ಮಾಜಿ ಸದಸ್ಯರೂ, ಚಿತ್ರದುರ್ಗ ಜಿಲ್ಲಾ ಪರಿಷತ್ ಮಾಜಿ ಸದಸ್ಯರು, ದಾವಣಗೆರೆ ಜಿಲ್ಲಾ ಕುರುಬ ಸಮಾಜದ ಗೌರವಾಧ್ಯಕ್ಷರು, ಮಕ್ಕಳ ಕಲ್ಯಾಣ ರಾಜ್ಯ ಪ್ರಶಸ್ತಿ ಪುರಸ್ಕೃತರೂ ಹಾಗೂ ಜಿಲ್ಲಾ ಮಟ್ಟದ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರೂ ಆದ ಶ್ರೀಯುತ

**ಡಾ. ಕೆ.ಪಿ. ಸಿದ್ದಬಸಪ್ಪ**

ಅವರು, ದಿನಾಂಕ 14.09.2020ರ ಸೋಮವಾರ ಮಧ್ಯಾಹ್ನ 3 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 96 ವರ್ಷ ವಯಸ್ಸಾಗಿತ್ತು. ಮೂವರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 15.09.2020ರ ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಮಲೇಬೆನ್ನೂರಿನಲ್ಲಿ ನೆರವೇರಲಿದೆ.

ದುಃಖತಪ್ತರು : ◆ ಪಿ.ಎಸ್. ಸೋಮಶೇಖರಪ್ಪ ◆ ಕೆ.ಪಿ.ಕೆಂಚಪ್ಪ ◆ ಕೆ.ಪಿ.ಗಂಗಾಧರ್, ಮತ್ತು ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಪೂಜಾರ್ ವಂಶಸ್ಥರು, ಮಲೇಬೆನ್ನೂರು.


## ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

॥ ಶ್ರೀ ಕಲ್ಲೇಶ್ವರ ಪ್ರಸನ್ನ ॥

**ಶ್ರೀ ಡಾ. ಶಾಮನೂರು ಶಿವಶಂಕರಪ್ಪನವರು**

ಶಾಸಕರು, ದಾವಣಗೆರೆ ದಕ್ಷಿಣ ಕ್ಷೇತ್ರ, ಮಾಜಿ ಸಚಿವರು, ಕರ್ನಾಟಕ ಸರ್ಕಾರ
ಗೌರವ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾಸಂಸ್ಥೆ, ದಾವಣಗೆರೆ. ಇವರು ಮಾಡುವ ವಿಜ್ಞಾಪನೆಗಳು.

ದಿನಾಂಕ 07.09.2020ನೇ ಸೋಮವಾರ ಬೆಳಿಗ್ಗೆ 11-30ಕ್ಕೆ
ನನ್ನ ಚಿಕ್ಕಪ್ಪನವರಾದ ದಿ॥ ಶ್ರೀ ಶಾಮನೂರು ಸಂಗಪ್ಪನವರ ಪುತ್ರರಾದ



ಜನನ : 28-06-1940

ನಿಧನ : 07-09-2020

**ಶ್ರೀ ಶಾಮನೂರು ಕಲ್ಲೇಶಪ್ಪನವರು**

ಅಧ್ಯಕ್ಷರು, ದಾವಣಗೆರೆ ರೈತರ ಫಸಲುಗಳ ಪರಿವರ್ತನಾ ಮತ್ತು ವ್ಯಾಪಾರೋದ್ಯಮ ಸಹಕಾರ ಸಂಘ (ನಿ), ದಾವಣಗೆರೆ.
ನಿರ್ದೇಶಕರು, ದಾವಣಗೆರೆ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ದಾವಣಗೆರೆ.

ಇವರು ಶಿವೈಕ್ಯರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

**ದಿನಾಂಕ 15-09-2020ನೇ ಮಂಗಳವಾರ ಬೆಳಿಗ್ಗೆ 10-30 ಕ್ಕೆ**
**ಶಾಮನೂರು ಹೌಸ್, ಲಾಯರ್ ರಸ್ತೆ, ದಾವಣಗೆರೆ ಇಲ್ಲಿ**

ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ,
ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು,

ದಿ॥ ಶ್ರೀ ಶಾಮನೂರು ಕಲ್ಲೇಶಪ್ಪನವರ ಮಕ್ಕಳು, ಅಳಿಯ, ಸೊಸೆಯಂದಿರು,
ಮೊಮ್ಮಕ್ಕಳು ಮತ್ತು ಸಹೋದರ-ಸಹೋದರಿಯರು, ಶಾಮನೂರು ವಂಶಸ್ಥರು
ಹಾಗೂ ಬಂಧು-ಮಿತ್ರರು. ಮೊ. : 94498 39885, 99000 55655, 81052 08425

# ಕನ್ನಡವನ್ನು ರಾಷ್ಟ್ರೀಯ ಭಾಷೆಯನ್ನಾಗಿಸಲು ಆಗ್ರಹ



ದಾವಣಗೆರೆ, ಸೆ.14- ಅಂತರರಾಷ್ಟ್ರೀಯ ಹಿಂದಿ ದಿನಕ್ಕೆ ಪರ್ಯಾಯವಾಗಿ ಅಂತರರಾಷ್ಟ್ರೀಯ ಕನ್ನಡ ಭಾಷಾ ದಿನವಾಗಿ ಕರ್ನಾಟಕ ನವ ನಿರ್ಮಾಣ ಸೇನೆ ಜಿಲ್ಲಾ ಘಟಕದಿಂದ ನಗರದಲ್ಲಿ ಇಂದು ಆಚರಿಸಲಾಯಿತು.

ಪ್ರಧಾನ ಅಂಚೆ ಕಚೇರಿ ಬಳಿ ಘಟಕದ ಜಿಲ್ಲಾಧ್ಯಕ್ಷ ಕೆ.ಎನ್. ವೆಂಕಟೇಶ್ ನೇತೃತ್ವದಲ್ಲಿ ಜಮಾಯಿಸಿದ್ದ ಘಟಕದ ಕಾರ್ಯಕರ್ತರು, ರಾಜ್ಯಾದ್ಯಂತ ಅಂತರ ರಾಷ್ಟ್ರೀಯ ಕನ್ನಡ ಭಾಷಾ ದಿನ ಆಚರಿಸುವಂತೆ ಕರೆ ನೀಡಿದರು.

ಅಲ್ಲದೇ, ಕೇಂದ್ರ ಸರ್ಕಾರಿ ಸ್ವಾಮ್ಯದ ಎಲ್ಲಾ ಕಚೇರಿಗಳಿಗೆ ತೆರಳಿ ಕನ್ನಡ ಬಾರದ ಸಿಬ್ಬಂದಿಗಳಿಗೆ ಕನ್ನಡ ಕಲಿಕಾ ಪುಸ್ತಕ ಮತ್ತು ಸಿಹಿ ನೀಡುವುದರ ಮೂಲಕ ಕನ್ನಡೇತರರಿಗೆ ಕನ್ನಡ ಕಲಿಯುವಂತೆ ಮನವಿ ಮಾಡಿದರು. ಕನ್ನಡ ಭಾಷೆಯ ಪುರಾತನತೆ ಮತ್ತು ಶ್ರೀಮಂತಿಕೆ ತಿಳಿಸುವ ಕರಪತ್ರಗಳನ್ನು ಕಚೇರಿಗಳಲ್ಲಿ ಹಂಚಿ ಜಾಗೃತಿ ಮೂಡಿಸಿದರು.

ಕೇವಲ 200 ವರ್ಷಗಳ ಇತಿಹಾಸವಿರುವ ಹಿಂದಿಗೆ ರಾಷ್ಟ್ರೀಯ ಭಾಷೆಯ ಸ್ಥಾನ-ಮಾನ ಕಲ್ಪಿಸಿ ಕೊಡುವ ನಿಟ್ಟಿನಲ್ಲಿ ಪ್ರತಿ ವರ್ಷ ಕೇಂದ್ರ ಸರ್ಕಾರ ಕೋಟ್ಯಾಂತರ ರೂ. ಹಣ ಖರ್ಚು ಮಾಡಿ ಸೆಪ್ಟೆಂಬರ್ 14ರಂದು ಆಚರಿಸುತ್ತಿರುವ ಅಂತರರಾಷ್ಟ್ರೀಯ ಹಿಂದಿ ದಿವಸ್ ಗೆ ಪರ್ಯಾಯವಾಗಿ 2700 ವರ್ಷಗಳ ಇತಿಹಾಸವುಳ್ಳ ಕನ್ನಡ ಭಾಷೆಯನ್ನು ರಾಷ್ಟ್ರೀಯ ಭಾಷೆಯನ್ನಾಗಿ ಘೋಷಿಸಬೇಕು ಹಾಗೂ ಕೇಂದ್ರ ಸರ್ಕಾರದ ಎಲ್ಲಾ ಕಚೇರಿಗಳಲ್ಲಿ ಕಡ್ಡಾಯ ಕನ್ನಡ ಬಳಕೆ ಮಾಡುವಂತೆ ಸಂಘಟನೆಯ ಕಾರ್ಯಕರ್ತರು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಉಪಾಧ್ಯಕ್ಷ ಶೇರ್ ಅಲಿ, ಜಿಲ್ಲಾ ಯುವ ಘಟಕದ ಪಾಂಡುರಂಗ, ಚಮನ್, ಕೃಷ್ಣಕುಮಾರ್, ಅಯಾಜ್ ಖಾನ್, ಪ್ರಸನ್ನ, ನೂರು ಮಹಮ್ಮದ್, ಅಷ್ಪಕ್ ಅಲಿ ಸೇರಿದಂತೆ ಇತರರಿದ್ದರು.

# ಹಿಂದಿ ಸಪ್ತಾಹ : ಕನ್ನಡಪರ ಸಂಘಟನೆಗಳ ಪ್ರತಿಭಟನೆ

ದಾವಣಗೆರೆ, ಸೆ.14- ಹಿಂದಿ ಸಪ್ತಾಹ ಆಚರಣೆ ಖಂಡಿಸಿ, ಕನ್ನಡ ಚಳುವಳಿ ಕೇಂದ್ರ ಸಮಿತಿ ಹಾಗೂ ಕನ್ನಡಪರ ಸಂಘಟನೆಗಳ ಒಕ್ಕೂಟದ ಪದಾಧಿಕಾರಿಗಳು ನಗರದ ಜಯದೇವ ವೃತ್ತದಲ್ಲಿ ಇಂದು ಪ್ರತಿಭಟನೆ ನಡೆಸಿದರು.

ಕೇಂದ್ರ ಸರ್ಕಾರ ಪ್ರತಿ ಸೆಪ್ಟೆಂಬರ್ 14ರಂದು ಹಿಂದಿ ದಿವಸ್ ಆಚರಣೆ ಮಾಡಲು ಕರೆ ನೀಡಿರುವುದು ಖಂಡನೀಯ. ಈಗಾಗಲೇ ರೈಲ್ವೆ ಇಲಾಖೆ, ಬ್ಯಾಂಕಿಂಗ್ ಮತ್ತು ಪರೀಕ್ಷಾ ವಲಯಗಳಲ್ಲಿ, ಅಂಚೆ ಕಚೇರಿಗಳಲ್ಲಿ, ಪತ್ರಿಕಾ ಕ್ರಮದಲ್ಲಿ ಕೇಂದ್ರ ಹತ್ತು ಹಲವು ಕ್ಷೇತ್ರಗಳಲ್ಲಿ ಬಲವಂತವಾಗಿ ಹಿಂದಿ ಹೇರಿಕೆ ಮಾಡುತ್ತಿರುವುದು ಸರಿಯಲ್ಲ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ನಮ್ಮ ಭಾಷೆಗೆ 2 ಸಾವಿರ ವರ್ಷಗಳ ಇತಿಹಾಸವಿದೆ. ಕನ್ನಡ ಕನ್ನಡಿಗರ ಜೀವನಾಡಿ. ನಮ್ಮ ನಾಡಿನ ಧೀಮಂತ ಸಾಹಿತಿಗಳು ಮತ್ತು ಸಂಶೋಧಕರು ಕನ್ನಡಕ್ಕೆ ಸಾಕಷ್ಟು ಕೊಡುಗೆ ನೀಡಿದ್ದಾರೆ. ಇಂತಹ ಸಂದರ್ಭದಲ್ಲಿ ಹಿಂದಿ ಹೇರಿಕೆ ದುರಂತ. ಯಾವುದೇ ಕಾರಣಕ್ಕೂ ದಕ್ಷಿಣ ಭಾರತದಲ್ಲಿ ಹಿಂದಿ ಹೇರಿಕೆ ಸಹಿಸುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹಿಂದಿ ಭಾಷೆಗೆ ನಾವು ಗೌರವವನ್ನು ನೀಡುತ್ತೇವೆ. ಹಿಂದಿ ಭಾಷೆ ನಮ್ಮ ಆಯ್ಕೆ ಆಗಬೇಕೇ ಹೊರತು ಕಡ್ಡಾಯವಲ್ಲ. ಅದೇ ರೀತಿ ಹಿಂದಿ ಹೇರಿಕೆಗೆ ಕಾರಣವಾಗಿರುವ ಪರಿಚ್ಛೇಧ 343-351 ರವರೆಗಿನ ವಿಧಿಗಳನ್ನು ತಿದ್ದುಪಡಿ ಮಾಡಬೇಕು. ಕರ್ನಾಟಕ ರಾಜ್ಯದಲ್ಲಿರುವ ಕೇಂದ್ರೀಯ ಸದನ ಶಿಕ್ಷಣ ಸಂಸ್ಥೆಗಳು ಸಿಬಿಎಸ್ ಇ ಮತ್ತು ಐಸಿಎಸ್ಇ, ನವೋದಯ ಸೇರಿದಂತೆ ರಾಜ್ಯದ ಸರ್ಕಾರಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ 1 ರಿಂದ 10 ನೇ ತರಗತಿವರೆಗೂ ಕನ್ನಡ ಭಾಷೆ ಕಡ್ಡಾಯ ಮಾಡಬೇಕೆಂದು ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಟಿ. ಶಿವಕುಮಾರ್, ಎಸ್.ಜಿ. ಸೋಮಶೇಖರ್, ಶುಭಮಂಗಳ, ರಾಮಣ್ಣ, ಸಂತೋಷ್ ಕುಮಾರ್, ಶ್ರೇಯಸ್, ಜಮ್ನಳ್ಳಿ ನಾಗರಾಜ್ ಸೇರಿದಂತೆ ಇತರರು ಭಾಗವಹಿಸಿದ್ದರು.

# ಸಲಿಂಗ ವಿವಾಹಕ್ಕೆ ಮಾನ್ಯತೆ ಇಲ್ಲ : ಕೇಂದ್ರ

**(1ನೇ ಪುಟದಿಂದ)** ಅರ್ಜಿಯಲ್ಲಿ ಕೇಳಲಾಗುತ್ತಿದೆ. ಎರಡನೆಯದಾಗಿ ಅರ್ಜಿಯಲ್ಲಿ ಕೇಳಲಾಗುತ್ತಿರುವ ಪರಿಹಾರ ನಮ್ಮ ಶಾಸನಾತ್ಮಕ ಅಂಶಗಳಿಗೆ ವಿರುದ್ದವಾಗಿದೆ. ನ್ಯಾಯಾಲಯ ಹಲವಾರು ಕಾನೂನುಗಳನ್ನು ಉಲ್ಲಂಘಿಸದೇ ಈ ಅರ್ಜಿಯಲ್ಲಿ ಕೇಳಿರುವುದನ್ನು ನೀಡಲು ಸಾಧ್ಯವಾಗದು ಎಂದು ಸಾಲಿಸಿಟರ್ ಜನರಲ್ ಹೇಳಿದ್ದಾರೆ.

ಹಿಂದೂ ವಿವಾಹ ಕಾಯ್ದೆಯಲ್ಲಿ ಮದುವೆಯನ್ನು ನಿಯಂತ್ರಿಸುವುದಕ್ಕೆ ಹಲವಾರು ಅಂಶಗಳಿವೆ. ಗಂಡ ಹಾಗೂ ಹೆಂಡತಿ ನಡುವಿನ ಸಂಬಂಧಗಳ ನಿರ್ಬಂಧಗಳ ಬಗ್ಗೆ ಹೇಳಲಾಗಿದೆ. ಸಲಿಂಗಿಗಳು ಮದುವೆಯಾದಾಗ ಈ ಪಾತ್ರಗಳನ್ನು ಯಾರು ನಿಭಾಯಿಸಬೇಕು? ಎಂದವರು ಪ್ರಶ್ನಿಸಿದ್ದಾರೆ.

ಈ ಬಗ್ಗೆ ಟಿಪ್ಪಣಿ ಮಾಡಿರುವ ಪೀಠ, ವಿಶ್ವದೆಲ್ಲೆಡೆ ಬದಲಾವಣೆ ಕಾಣುತ್ತದೆ. ಆದರೆ, ಅದು ಭಾರತಕ್ಕೆ ಅನ್ವಯವಾಗಬಹುದು ಅಥವಾ ಅನ್ವಯವಾಗದೇ ಇರಬಹುದು ಎಂದು ಹೇಳಿದೆ.

ಆದರೆ, ಈ ನಿರ್ದಿಷ್ಟ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ಬಗ್ಗೆ ಹೇಳುವುದಾದರೆ, ಸಮಸ್ಯೆಗೆ ಗುರಿಯಾದವರು ಸುಶಿಕ್ಷಿತರಾಗಿದ್ದಾರೆ. ಅವರೇ ಅರ್ಜಿ ಸಲ್ಲಿಸಬಹುದಿತ್ತು. ನಾವೇಕೆ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಪರಿಗಣಿಬೇಕು ಎಂದು ಪೀಠ ಕೇಳಿದೆ.

ಅರ್ಜಿದಾರರ ಪರವಾಗಿ ಹಾಜರಿದ್ದ ವಕೀಲರು, ಜನರು ಪ್ರತಿರೋಧಕ್ಕೆ ಹೆದರುತ್ತಿದ್ದಾರೆ. ಹೀಗಾಗಿ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿದ್ದಾರೆ ಎಂದರು.

ಸಲಿಂಗ ಮದುವೆ ನೋಂದಾಯಿಸಲು ಸಾಧ್ಯವಾಗದವರ ಪಟ್ಟಿಯನ್ನು ನೀಡುವಂತೆ ಅರ್ಜಿದಾರರ ಪರವಾಗಿ ಹಾಜರಿದ್ದ ವಕೀಲ ಅಭಿಜಿತ್ ಅಯ್ಯರ್ ಮಿತ್ರಗೆ ನ್ಯಾಯಾಲಯ ತಿಳಿಸಿದೆ.

# ಬೆಂಬಲ ಬೆಲೆ ಮುಂದುವರಿಕೆ

**(1ನೇ ಪುಟದಿಂದ)** ಕಡಿಮೆ ಜಮೀನು ಹೊಂದಿರುವ ರೈತರ ಸಂಖ್ಯೆ ಶೇ.86ರಷ್ಟಿದೆ. ಇದರಲ್ಲಿ ಬಹುತೇಕರು ಬೆಂಬಲ ಬೆಲೆ ಪಡೆಯುವುದರಿಂದ ಕೆಲವೊಮ್ಮೆ ವಂಚಿತರಾಗುತ್ತಿದ್ದಾರೆ ಎಂದು ಸಚಿವ ತೋಮರ್ ತಿಳಿಸಿದರು.

ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಕಾಂಗ್ರೆಸ್ ಹಾಗೂ ಟಿಎಂಸಿ ಸದಸ್ಯರು, ಶಾಸನದಿಂದ ಕೇವಲ ಬಂಡವಾಳಶಾಹಿಗಳಿಗೆ ನೆರವಾಗುತ್ತದೆ. ಕೇಂದ್ರ ಸರ್ಕಾರ ಸಂವಿಧಾನದ ಒಕ್ಕೂಟ ವ್ಯವಸ್ಥೆ ಮೇಲೆ ದಾಳಿ ನಡೆಸುತ್ತಿದೆ ಎಂದರು.

ಆದರೆ, ಮಸೂದೆಗಳನ್ನು ಸಮರ್ಥಿಸಿಕೊಂಡಿರುವ ತೋಮರ್, ಸರ್ಕಾರ ತನ್ನ ವ್ಯಾಪ್ತಿಯಲ್ಲೇ ಮಸೂದೆಗಳನ್ನು ರೂಪಿಸುತ್ತಿದೆ. ಪ್ರತಿಪಕ್ಷಗಳ ಸದಸ್ಯರು ಕೇಂದ್ರ ಸರ್ಕಾರದ ಮೇಲೆ ನಂಬಿಕೆ ಇರಿಸಬೇಕು ಎಂದಿದ್ದಾರೆ.

ಮಸೂದೆಗಳನ್ನು ವಿರೋಧಿಸುವ ಮೊದಲು ಅದರಲ್ಲಿನ ಅಂಶಗಳನ್ನು ಪರಿಗಣಿಸಬೇಕು. ಈ ಕಾಯ್ದೆಗಳಿಂದ ರೈತರಿಗೆ ಸಾಕಷ್ಟು ಲಾಭವಾಗುತ್ತದೆ. ಅವರು ಖಾಸಗಿ ವ್ಯಾಪಾರಿಗಳ ಜೊತೆ ತಮ್ಮ ಉತ್ಪನ್ನ ಮಾರಾಟದ ಕುರಿತ ಒಪ್ಪಂದ ಮಾಡಿಕೊಳ್ಳಬಹುದು ಎಂದು ಸಚಿವರು ಹೇಳಿದ್ದಾರೆ.

## 'ಕನ್ನಡ ದಿನ' ಆಚರಿಸಲು ಆಗ್ರಹ

**(1ನೇ ಪುಟದಿಂದ)** ಹೇರಿಕೆಯಿಂದ ಕಲಿಕೆಯಾಗಲು ಸಾಧ್ಯವಿಲ್ಲ. ಭಾಷೆಯೊಂದರ ಹೇರಿಕೆಯು ಇನ್ನೊಂದು ಭಾಷೆಯ ಅಸ್ಮಿತೆಯನ್ನು ಪ್ರಶ್ನಿಸುವಂತಿರಬಾರದು. ಭಾಷೆಯ ಹೇರಿಕೆಯು ಮತ್ತೊಂದು ಭಾಷೆಯ ಅವಸಾನಕ್ಕೆ ದಾರಿಯಾಗಬಾರದು. ದೇಶದ ಸಂಸ್ಕೃತಿ, ವೈವಿಧ್ಯತೆ, ಸಮಗ್ರತೆಗೆ ಧಕ್ಕೆ ತರಬಾರದು.

ಕೇಂದ್ರದ ಆಡಳಿತದಲ್ಲಿ ಹಿಂದಿ ಜಾರಿಗೆ ಬಂದಿದ್ದಕ್ಕಾಗಿ, ಹಿಂದಿ ಜಾರಿ ಹೋರಾಟ ಮಾಡಿದ ಬೋಹರ್ ರಾಜೇಂದ್ರ ಸಿಂಹ ಜನ್ಮದಿನದ ನೆನಪಿಗಾಗಿ ಸೆ. 14ರಂದು ಹಿಂದಿ ದಿವಸ ಆಚರಿಸಲಾಗುತ್ತಿದೆ. ರಾಜೇಂದ್ರ ಸಿಂಹ ಹುಟ್ಟುಹಬ್ಬದಲ್ಲಿ, ಹಿಂದಿ ಆಡಳಿತ ಭಾಷೆ ಆಗಿದ್ದರಲ್ಲಿ ಹಿಂದಿಯೇತರರು ಸಂಭ್ರಮಿಸುವುದು ಏನಿದೆ? ನಿರರ್ಥಕ ಹಿಂದಿ ದಿವಸ ರದ್ದಾಗಬೇಕು ಎಂದು ತಿಳಿಸಿದ್ದಾರೆ.

ಸಂವಿಧಾನದ ಪರಿಚ್ಛೇದ 343, 344, 345ರಲ್ಲಿ ಹಿಂದಿಗೆ ಉತ್ತೇಜನ ನೀಡುವ ಗೊಂದಲಕಾರಿ ಅಂಶಗಳಿವೆ. ಇದೇ ಗುರಾಣಿ ಹಿಡಿದು ಹಿಂದಿ ಹೇರಿಕೆ ಪ್ರಯತ್ನಗಳು ನಿರಂತರವಾಗಿ ನಡೆದಿವೆ.

ಸಂವಿಧಾನವನ್ನು ಬದಲಿಸಲೇ ಬಂದಿರುವ ಬಿಜೆಪಿಗರು, ಒಂದೊಳ್ಳೆ ಕಾರಣಕ್ಕಾಗಿ ಇದನ್ನು ಬದಲಿಸಲಿ. ಈ ಮೂಲಕ ಕನ್ನಡವೂ ಸೇರಿದಂತೆ ಅನ್ಯ ಭಾಷೆಗಳ ಅಸ್ಮಿತೆಯನ್ನು ರಕ್ಷಿಸಲಿ ಎಂದು ಒತ್ತಾಯಿಸಿದ್ದಾರೆ.

## ಹಿರಿಯ ಮುತ್ಸದ್ಧಿ ಸಿದ್ದಬಸಪ್ಪ ಇನ್ನಿಲ್ಲ


**(1ನೇ ಪುಟದಿಂದ)** ಮಂಗಳವಾರ ಬೆಳಿಗ್ಗೆ 11 ಗಂಟೆಗೆ ಮಲೇಬೆನ್ನೂರು ಪಟ್ಟಣದಲ್ಲಿ ನೆರವೇರಲಿದೆ.

**ನಿರಂತರ ಸೇವೆ :** ಮಲೇಬೆನ್ನೂರು ಗ್ರಾ.ಪಂ. ಮಾಜಿ ಅಧ್ಯಕ್ಷರಾಗಿ ವಿಎಸ್ಎಸ್ಎನ್ ಅಧ್ಯಕ್ಷರಾಗಿ, ಹರಿಹರ ತಾಲ್ಲೂಕು ಬೋರ್ಡ್ ಸದಸ್ಯರಾಗಿ, ಚಿತ್ರದುರ್ಗ ಜಿಲ್ಲಾ ಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸಿರುವ ಸಿದ್ದಬಸಪ್ಪ ಅವರು ಕಳೆದ 60 ವರ್ಷಗಳಿಂದ ನಿರಂತರವಾಗಿ ರಾಜಕೀಯ, ಸಾಮಾಜಿಕ ಹಾಗೂ ಧಾರ್ಮಿಕ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿದ್ದಾರೆ.

ಮಲೇಬೆನ್ನೂರು ಪಟ್ಟಣದಲ್ಲಿ ಶ್ರೀ ಬೀರಲಿಂಗೇಶ್ವರ ವಿದ್ಯಾಸಂಸ್ಥೆಯನ್ನು ಬೆಳೆಸಿ, ಆ ಮೂಲಕ ಗ್ರಾಮೀಣ ಭಾಗದ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿದ ಕಾರಣಕ್ಕಾಗಿ ಮಕ್ಕಳ ಕಲ್ಯಾಣ ರಾಜ್ಯ ಪ್ರಶಸ್ತಿಯನ್ನು ಅಂದಿನ ಎಸ್.ಎಂ.ಕೃಷ್ಣ ಅವರ ಸರ್ಕಾರ ನೀಡಿ ಗೌರವಿಸಿತ್ತು. ಸದಾ ಕಾಲ ಕಾಂಗ್ರೆಸ್ ಪಕ್ಷದಲ್ಲಿ ಗುರುತಿಸಿಕೊಂಡು ಬಂದಿರುವ ಅವರು, ಪಕ್ಷಾತೀತವಾಗಿ ಎಲ್ಲಾ ನಾಯಕರ ಅಭಿಮಾನ ಗಳಿಸಿದ್ದರು. ಬಾಳೆಹೊನ್ನೂರಿನ ರಂಭಾಪುರಿ ಪೀಠ, ಕಾಗಿನೆಲೆ ಕನಕ ಗುರುಪೀಠ, ವಾಲ್ಮೀಕಿ ಗುರುಪೀಠ ಸೇರಿದಂತೆ ಹಲವು ಮಠ ಮಾನ್ಯಗಳಿಂದ ಗೌರವ ಪ್ರಶಸ್ತಿ, ಸನ್ಮಾನ, ಸ್ವೀಕರಿಸುವುದರೊಂದಿಗೆ ಎಲ್ಲಾ ಮಠಾಧೀಶರ ಪ್ರೀತಿಗೆ ಪಾತ್ರರಾಗಿದ್ದರು.

ಸಿದ್ದರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ ಅವರ ಮೇಲೆ ಒತ್ತಡ ಹಾಕಿ, ಮಲೇಬೆನ್ನೂರು ಗ್ರಾಮ ಪಂಚಾಯತಿ ಅನ್ನು ಪುರಸಭೆಯನ್ನಾಗಿ ಮೇಲ್ದರ್ಜೆಗೆ ಏರಿಸಲು ಸಿದ್ದಬಸಪ್ಪ ಅವರು ಶ್ರಮಿಸಿದ್ದರು. ಈ ಹಿಂದೆ ಹರಿಹರ ತಾಲ್ಲೂಕು ಕುರುಬ ಸಮಾಜ ಅಧ್ಯಕ್ಷರಾಗಿದ್ದ ಸಿದ್ದಬಸಪ್ಪ ಅವರು, ಈಗ ದಾವಣಗೆರೆ ಜಿಲ್ಲಾ ಕುರುಬ ಸಮಾಜದ ಗೌರವಾಧ್ಯಕ್ಷರಾಗಿದ್ದರು.

## ನಗರದಲ್ಲಿ ಇಂದು ಜಯದೇವ ಜಗದ್ಗುರುಗಳ ರಥೋತ್ಸವ



ಲಿಂ. ಶ್ರೀ ಜಯದೇವ ಮುರುಘರಾಜೇಂದ್ರ ಮಹಾಸ್ವಾಮೀಜಿಯವರ 64ನೇ ರಥೋತ್ಸವ ಹಾಗೂ ವಚನ ಗ್ರಂಥ ಮೆರವಣಿಗೆ ಇಂದು ಸಂಜೆ 5 ಗಂಟೆಗೆ ಬಸವ ಕೇಂದ್ರ - ಶ್ರೀ ಶಿವಯೋಗಾಶ್ರಮದಲ್ಲಿ ನಡೆಯಲಿದೆ.

ನಂತರ ಸಂಜೆ 6 ಗಂಟೆಗೆ ನಡೆಯಲಿರುವ ಶ್ರೀಗಳ 64 ನೇ ಸ್ಮರಣೋತ್ಸವ ಹಾಗೂ ವಚನ ಸಂಗೀತೋತ್ಸವ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಡಾ. ಶ್ರೀ ಶಿವಮೂರ್ತಿ ಮುರುಘಾ ಶರಣರು ವಹಿಸುವರು. ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ ಸಮ್ಮುಖದಲ್ಲಿ ಕಾರ್ಯಕ್ರಮ ನಡೆಯಲಿದ್ದು, ವಚನ ಭಜನೆಯನ್ನು ಶ್ರೀ ಬಸವ ಕಲಾಲೋಕದವರು ನಡೆಸಿಕೊಡುವರು.

## ಅಜಯ್ ಎ. ಮಿರಜ್‌ಕರ್ ರಾಜೀವ್‌ಗಾಂಧಿ ಪಂಚಾಯತ್‌ರಾಜ್ ಉತ್ತರ ವಲಯ ಅಧ್ಯಕ್ಷ



ದಾವಣಗೆರೆ, ಸೆ.12- ಕಾಂಗ್ರೆಸ್ ಪಕ್ಷದ ರಾಜೀವ್‌ಗಾಂಧಿ ಪಂಚಾಯತ್‌ರಾಜ್ ಸಂಘಟನೆಯ ದಾವಣಗೆರೆ ಉತ್ತರ ವಲಯ ವಿಧಾನಸಭಾ ಕ್ಷೇತ್ರದ ಅಧ್ಯಕ್ಷರಾಗಿ ಅಜಯ್ ಎ. ಮಿರಜ್‌ಕರ್ ನೇಮಕಗೊಂಡಿದ್ದಾರೆ.

## ಹರಪನಹಳ್ಳಿ: ಜೆಇಇನಲ್ಲಿ ಬಿ. ಮಾರುತಿಗೆ 355ನೇ ರ್‍ಯಾಂಕ್



ಹರಪನಹಳ್ಳಿ, ಸೆ.14- ಪಟ್ಟಣದ ವಾಲ್ಮೀಕಿ ನಗರದ ಬಾಣದ ಮಾರುತಿ ಇತ್ತೀಚಿಗೆ ನಡೆದ ಜೆ.ಇ.ಇ. (ಮೇನ್) ಪರೀಕ್ಷೆಯಲ್ಲಿ 355ನೇ ರ್‍ಯಾಂಕ್ ಪಡೆದಿದ್ದಾರೆ. ವಿದ್ಯಾರ್ಥಿ ಬಾಣದ ಮಾರುತಿ ದಾವಣಗೆರೆಯ ಸರ್.ಎಂ.ವಿ. ಕಾಲೇಜಿನ ವಿದ್ಯಾರ್ಥಿ.

## ನೇಣು ಬಿಗಿದ ಸ್ಥಿತಿಯಲ್ಲಿ ಗೃಹಿಣಿ ಶವ ಪತ್ತೆ

ದಾವಣಗೆರೆ, ಸೆ.14- ನೇಣು ಬಿಗಿದ ಸ್ಥಿತಿಯಲ್ಲಿ ಗೃಹಿಣಿ ಶವ ಪತ್ತೆಯಾಗಿದ್ದು, ವರದಕ್ಷಿಣೆ ಕಿರುಕುಳ ನೀಡಿ ಗಂಡನ ಮನೆಯವರೇ ಕೊಲೆ ಮಾಡಿರುವುದಾಗಿ ಆಕೆಯ ಕುಟುಂಬದವರು ಶಂಕೆ ವ್ಯಕ್ತಪಡಿಸಿದ್ದಾರೆ.

ಶಿಲ್ಪಾ (22) ಸಾವನ್ನಪ್ಪಿದ ಮಹಿಳೆ. ದಾವಣಗೆರೆ ತಾಲ್ಲೂಕು ಪರಶುರಾಮಪುರದ ಶಿಲ್ಪ ಅವರನ್ನು ಚನ್ನಗಿರಿ ತಾಲ್ಲೂಕಿನ ದೇವರಹಳ್ಳಿ ಸಮೀಪದ ಹಿರೇಉಡ ತಾಂಡಾದ ದೀಪಕ್ ಅವರೊಂದಿಗೆ ಕಳೆದ ನಾಲ್ಕು ತಿಂಗಳ ಹಿಂದೆ ವಿವಾಹ ಮಾಡಿಕೊಡಲಾಗಿತ್ತು. ವರದಕ್ಷಿಣೆ ಕಿರುಕುಳ ನೀಡಿ ಆಕೆಯನ್ನು ಹತ್ಯೆ ಮಾಡಲಾಗಿದೆ ಎಂದು ಶಿಲ್ಪ ಕುಟುಂಬಸ್ಥರು ಆರೋಪ ಮಾಡಿದ್ದು, ಈ ಬಗ್ಗೆ ಚನ್ನಗಿರಿ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪತಿ ದೀಪಕ್ ಹಾಗೂ ಅವರ ಕುಟುಂಬ ಸದಸ್ಯರು ನಾಪತ್ತೆಯಾಗಿದ್ದಾರೆನ್ನಲಾಗಿದೆ.

## ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ವಾಸವಿ ದೇವಸ್ಥಾನ, ಡಿ.ಸಿ.ಎಂ. ಟೌನ್‌ಶಿಪ್ ಹಾಗೂ ಸುತ್ತ ಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಗಂಟೆಯುವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.

## ಗ್ರಾಮೀಣ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯ

ಇಂದು ಬೆಳಿಗ್ಗೆ 10 ರಿಂದ ಸಂಜೆ 6.30 ರವರೆಗೆ ಜೆ.ಹೆಚ್.ಪಿ. ಬಡಾವಣೆ, ಜನತಾ ಕಾಲೋನಿ, ಎ.ಕೆ. ಕಾಲೋನಿ, ಶಿವ ಪಾರ್ವತಿ ಬಡಾವಣೆ, ನಾಗನೂರು ರಸ್ತೆ ವ್ಯಾಪ್ತಿಯಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

## ಭರ್ತಿಯಾದ ಚೆಕ್ ಡ್ಯಾಂ ವೀಕ್ಷಣೆ



ದಾವಣಗೆರೆ, ಸೆ.14- ನಗರದ ಐಸಿಎಆರ್ ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ನಿಕ್ರಾ ಯೋಜನೆಯಡಿಯಲ್ಲಿ ಸಿದ್ದನೂರು ತಾಂಡಾದಲ್ಲಿ ಸ್ವಾಭಾವಿಕ ಸಂಪನ್ಮೂಲ ನಿರ್ವಹಣೆ ವಿಭಾಗದಲ್ಲಿ ಚೆಕ್ ಡ್ಯಾಮ್ ಹೂಳನ್ನು ತೆಗೆಯಲಾಗಿತ್ತು. ಸಿದ್ದನೂರಿನಲ್ಲಿ ಬಂದ ಉತ್ತಮ ಮಳೆಯಿಂದ ಚೆಕ್ ಡ್ಯಾಮ್‌ಗಳು ಭರ್ತಿಯಾಗಿವೆ. ಕೃಷಿ ವಿಜ್ಞಾನ ಕೇಂದ್ರದ ವಿಜ್ಞಾನಿಗಳು ಭರ್ತಿಯಾದ ಚೆಕ್ ಡ್ಯಾಂಗಳನ್ನು ವೀಕ್ಷಿಸಿದರು.

ಪ್ರಗತಿಪರ ರೈತರಾದ ತಿಪ್ಪೇಶ್ ನಾಯಕ ಹೇಳುವ ಪ್ರಕಾರ ಈ ಚೆಕ್ ಡ್ಯಾಮ್ ತುಂಬಿರುವುದರಿಂದ ನಮಗೆ ವರ್ಷಪೂರ್ತಿ ದನಕರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಇರುವುದಿಲ್ಲ. ಸುತ್ತಮುತ್ತಲಿನ ಬೋರ್‌ವೆಲ್‌ಗಳಿಗೆ ರಿಚಾರ್ಜ್ ಆಗುತ್ತದೆ ಎಂದು ಅಭಿಪ್ರಾಯಪಟ್ಟರು. ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥ ಡಾ.ದೇವರಾಜ್, ಬೇಸಾಯ ತಜ್ಞ ಮಲ್ಲಿಕಾರ್ಜುನ್ ಸ್ಥಳಗಳಿಗೆ ಭೇಟಿ ನೀಡಿದರು.

## ಅರಸೀಕೆರೆ ಗ್ರಾ.ಪಂ.ನಲ್ಲಿ ಪೋಷಣ್ ಮಾಸಾಚರಣೆ



ಅರಸೀಕೆರೆ, ಸೆ.14- ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ಅರಸೀಕೆರೆ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ 'ಪೋಷಣ್ ಮಾಸಾಚರಣೆ' ಹಾಗೂ 'ಪೋಷಣ್ ರಥ' ಸಂಚಾಲನಾ ಕಾರ್ಯಕ್ರಮವನ್ನು ನಡೆಸಲಾಯಿತು. ಗ್ರಾಮ ಪಂಚಾಯ್ತಿ ಅಭಿವೃದ್ಧಿ ಅಧಿಕಾರಿ ಮಹಮದ್ ಹುಸೇನ್, ಕೆ. ಹೆಚ್. ಕಣ್ಣಿ, ಅಶೋಕ ಟಕ್ಕಳಿಕೆ, ಮರಿಯಪ್ಪ ಪೂಜಾರ್ ಮತ್ತಿತರರು ಭಾಗವಹಿಸಿದ್ದರು.

## ಹೋಮಿಯೋಪತಿ ಔಷಧಿ ಒಪ್ಪಿಗೆ

**(1ನೇ ಪುಟದಿಂದ)** ಅಂಗೀಕಾರ ದೊರೆತಂತಾಗಿದೆ. ರಾಷ್ಟ್ರಪತಿ ರಾಮ ನಾಥ ಕೋವಿಂದ್ ಅವರು ಔಪಚಾರಿಕ ಒಪ್ಪಿಗೆ ನೀಡಿದ ನಂತರ ಮಸೂದೆ ಜಾರಿಗೆ ಬರಲಿದೆ. ಕೆಲ ಸದಸ್ಯರು ಮಸೂದೆಯನ್ನು ವಿರೋಧಿಸಿದ್ದು, ವ್ಯಾಪಕ ಪರಿಗಣನೆಯ ಅಗತ್ಯವಿದೆ ಎಂದು ಹೇಳಿದರು.

ಮಸೂದೆಯನ್ನು ಸಮರ್ಥಿಸಿಕೊಂಡ ಕೇಂದ್ರ ಆರೋಗ್ಯ ಸಚಿವ ಹರ್ಷ ವರ್ಧನ್, ಇದರಿಂದಾಗಿ ಹೋಮಿಯೋಪತಿ ಹಾಗೂ ಭಾರತೀಯ ವ್ಯವಸ್ಥೆಗಳ ಔಷಧಗಳು ಉತ್ತಮವಾಗಲಿವೆ ಎಂದರು.

ಪ್ರಸ್ತಾಪಿತ ಶಾಸನದಿಂದ ಸಮುದಾಯ ಆರೋಗ್ಯಕ್ಕೆ ಉತ್ತೇಜನ ಸಿಗಲಿದೆ.

ವೈದ್ಯಕೀಯ ವೃತ್ತಿಪರರ ಸೇವೆ ಎಲ್ಲ ನಾಗರಿಕರಿಗೆ ತಲುಪಲಿದೆ ಎಂದು ಸಚಿವರು ಹೇಳಿದ್ದಾರೆ.

## ಸೆ.21 ರಿಂದ ಶಾಲೆಗಳು ಆರಂಭ

**(1ನೇ ಪುಟದಿಂದ)** ಬೋಧನೆ ಮಾಡುವ ಬಗ್ಗೆ ಇಲಾಖೆ ಸೂಚನೆ ನೀಡಲಿದೆ.

ಕಳೆದ ಜೂನ್ 1 ರಿಂದಲೇ ಶಾಲೆಗಳು ಆರಂಭವಾಗಬೇಕಿತ್ತು. ಕೊರೊನಾ ಸೋಂಕಿನ ಹಿನ್ನೆಲೆಯಲ್ಲಿ ಹತ್ತನೇ ತರಗತಿ ಹೊರತುಪಡಿಸಿ, 1 ರಿಂದ 11ನೇ ತರಗತಿಗಳ ಮಕ್ಕಳನ್ನು ಪರೀಕ್ಷೆಯಿಲ್ಲದೆ ಮುಂದಿನ ವರ್ಷಕ್ಕೆ ಬಡ್ತಿ ಮಾಡಲಾಗಿದೆ.

ಉನ್ನತ ಶಿಕ್ಷಣದಲ್ಲೂ ಅಂತಿಮ ವರ್ಷ ಇಲ್ಲವೇ ಸೆಮಿಸ್ಟರ್ ಹೊರತುಪಡಿಸಿ, ಉಳಿದ ವಾರ್ಷಿಕ ಪರೀಕ್ಷೆ ನಡೆಸದೇ, ವಿದ್ಯಾರ್ಥಿಗಳನ್ನು ಮುಂದಿನ ತರಗತಿಗೆ ಬಡ್ತಿ ನೀಡಲಾಗಿದೆ.

## ಸಚಿವ ಭೈರತಿಗೆ ಪಾಸಿಟಿವ್

**(1ನೇ ಪುಟದಿಂದ)** ಪಡೆಯುತ್ತಿದ್ದೇನೆ ಎಂದು ಸಚಿವರು ಟ್ವೀಟ್ ಮಾಡಿದ್ದಾರೆ. ಎಲ್ಲರ ಶುಭ ಹಾರೈಕೆಗಳಿಂದ ನಾನು ಶೀಘ್ರದಲ್ಲೇ ಗುಣಮುಖವಾಗಿ ಹೊರ ಬರುವುದಾಗಿಯೂ ಅವರು ತಿಳಿಸಿದ್ದಾರೆ.

ಸಿಎಂ ಬಿ.ಎಸ್. ಯಡಿಯೂರಪ್ಪ ಸೇರಿದಂತೆ ಹಲವಾರು ಸಚಿವರು ಈಗಾಗಲೇ ಕೊರೊನಾ ಸೋಂಕಿಗೆ ಸಿಲುಕಿ, ನಂತರ ಗುಣಮುಖರಾಗಿದ್ದಾರೆ.

ಪಶು ಸಂಗೋಪನಾ ಸಚಿವ ಪ್ರಭು ಚವ್ಹಾಣ್, ಕಾರ್ಮಿಕ ಸಚಿವ ಎ. ಶಿವರಾಮ ಹೆಬ್ಬಾರ್, ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯ್ತಿ ಸಚಿವ ಕೆ. ಎಸ್. ಈಶ್ವರಪ್ಪ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರಾದ ಶಶಿಕಲ ಜೊಲ್ಲೆ ಮತ್ತಿತರರು ಇತ್ತೀಚೆಗೆ ಸೋಂಕಿಗೆ ಗುರಿಯಾಗಿದ್ದರು.

## ನಗರದಲ್ಲಿಂದು ಪ್ರತಿಭಟನೆ

ಕರ್ನಾಟಕ ದಲಿತ ಸಂಘರ್ಷ ಸಮಿತಿ (ದಾದಾ ಸಾಹೇಬ್ ಡಾ. ಎನ್. ಮೂರ್ತಿ ಸ್ಥಾಪಿತ) ಯ ಜಿಲ್ಲಾ ಸಮಿತಿ ಆಶ್ರಯದಲ್ಲಿ ದಲಿತರ ಮೇಲೆ ಹೆಚ್ಚುತ್ತಿರುವ ದೌರ್ಜನ್ಯ ವಿರೋಧಿಸಿ ಪ್ರತಿಭಟನಾ ಮೆರವಣಿಗೆಯನ್ನು ಇಂದು ಬೆಳಿಗ್ಗೆ 12 ಗಂಟೆಗೆ ಮಹಾನಗರ ಪಾಲಿಕೆಯಿಂದ ಉಪವಿಭಾಗಾಧಿಕಾರಿಗಳ ಕಚೇರಿವರೆಗೆ ಮೆರವಣಿಗೆ ನಡೆಸಲಾಗುವುದು ಎಂದು ಸಂಘಟನೆಯ ಜಿಲ್ಲಾಧ್ಯಕ್ಷರುಗಳಾದ ಎನ್. ಮಲ್ಲೇಶ್ ಕುಕ್ಕುವಾಡ, ಜಿಲ್ಲಾ ಅಧ್ಯಕ್ಷ (ಡಿ.ಎಸ್.ಸಿ) ಸಿ. ಬಸವರಾಜ್ ತಿಳಿಸಿದ್ದಾರೆ.

## ಮಸೂದೆ ಮಂಡನೆ

**(1ನೇ ಪುಟದಿಂದ)** ಹೇಳಿದರು.

ರಾಯ್ ಮಾತನಾಡುವ ಸಂದರ್ಭದಲ್ಲಿ ಸಚಿವೆಯ ವಿರುದ್ಧ ವೈಯಕ್ತಿಕ ಹೇಳಿಕೆಗಳನ್ನು ನೀಡಿದರು. ಇದಕ್ಕೆ ಸಂಸದೀಯ ವ್ಯವಹಾರಗಳ ಸಚಿವ ಪ್ರಹ್ಲಾದ್ ಜೋಷಿ ಸೇರಿದಂತೆ ಆಡಳಿತಾರೂಢ ಸಂಸದರು ಆಕ್ಷೇಪಿಸಿ ಕ್ಷಮಾಯಾಚನೆಗೆ ಒತ್ತಾಯಿಸಿದರು.ರಾಯ್ ಹೇಳಿಕೆಗಳನ್ನು ಕಡತದಿಂದ ತೆಗೆದು ಹಾಕಿರುವುದಾಗಿ ಸ್ಪೀಕರ್ ಓಂ ಬಿರ್ಲಾ ಹೇಳಿದರು.

## ರಫ್ತಿನ ನಿಷೇಧ

**(1ನೇ ಪುಟದಿಂದ)** ಹೇರಲಾಗಿರುವ ನಿಷೇಧ ತಕ್ಷಣದಿಂದಲೇ ಜಾರಿಗೆ ಬರಲಿದೆ. ಭಾರತ ಅತಿ ದೊಡ್ಡ ಈರುಳ್ಳಿ ರಫ್ತು ದೇಶವಾಗಿದೆ. ಬಾಂಗ್ಲಾದೇಶ, ನೇಪಾಳ, ಮಲೇಷಿಯ ಹಾಗೂ ಶ್ರೀಲಂಕಾಗಳು ಭಾರತದಿಂದ ಈರುಳ್ಳಿ ಆಮದು ಮಾಡಿಕೊಳ್ಳುತ್ತವೆ. ಭಾರತದ ಅತಿ ದೊಡ್ಡ ಸಗಟು ಈರುಳ್ಳಿ ಮಾರಾಟ ತಾಣವಾದ ಮಹಾರಾಷ್ಟ್ರದ ಲಸಲ್‌ಗಾಂವ್‌ನಲ್ಲಿ ಈರುಳ್ಳಿ ಬೆಲೆ ತೀವ್ರ ಏರಿಕೆ ಕಂಡಿದ್ದು, ಟನ್‌ಗೆ 30 ಸಾವಿರ ರೂ.ಗಳವರೆಗೆ ಮುಟ್ಟಿದೆ. ಇದೇ ವೇಳೆ ರಾಜಧಾನಿ ದೆಹಲಿಯಲ್ಲಿ ಈರುಳ್ಳಿ ಬೆಲೆ ಕೆಜಿಗೆ 40 ರೂ.ಗಳಿಗೆ ತಲುಪಿದೆ.


## ಕ್ರಯಪತ್ರ ಕಳೆದಿದೆ

ದಾವಣಗೆರೆ ಸಿಟಿ ಬಾಪೂಜಿ ವಿದ್ಯಾನಗರ ತರಳಬಾಳು ಬಡಾವಣೆ 17ನೇ ಕ್ರಾಸ್, 3ನೇ ಹಂತ ಡೋರ್ ನಂ. 2009/97 ರಲ್ಲಿ ವಾಸವಾಗಿರುವ 66 ವಯಸ್ಸಿನ **ಹೆಚ್. ಗುರುಮೂರ್ತಿ ಬಿನ್ ಹಾಲ್ಯಾನಾಯ್ಕ** ಮತ್ತು 57 ವರ್ಷ ವಯಸ್ಸಿನ **ಶಕುಂತಲ ಕೋಂ ಹೆಚ್. ಗುರುಮೂರ್ತಿ** ಆದ ನಾವುಗಳು, ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ ಶಿರಮಗೊಂಡನಹಳ್ಳಿ ಗ್ರಾಮದ ರಿ.ಸ.ನಂ. 54/4ಎ/ಹೆಚ್ ವುಳ್ಳದ್ದರಲ್ಲಿ ವಿಂಗಡಿಸಿರುವ ಸೈಟುಗಳ ಪೈಕಿ ಸೈಟ್ ನಂ. 22, ಚಾಲ್ತಿ ಡೋರ್ ನಂ. 2073/22, ಅಳತೆ : 40x60 ಅಡಿ ವುಳ್ಳ ಸ್ವತ್ತನ್ನು ಸೀತಾಬಾಯಿ ಕೋಂ ಈಶ್ವರನಾಯ್ಕ ಇವರಿಂದ ನಾವು ಕ್ರಯಕ್ಕೆ ಪಡೆದುಕೊಂಡಿರುತ್ತೇವೆ.

ಈ ಸ್ವತ್ತಿಗೆ ಸಂಬಂಧಿಸಿದ ಹಳೇ ಜಿ.ಪಿ.ಎ ಪತ್ರ ಇದರ ರಿ.ನಂ. ಡಿವಿಜಿ-4-00/20/2007-08, ದಿನಾಂಕ 15.05.2007 ಮತ್ತು ಕ್ರಯಪತ್ರ ಇದರ ರಿ.ನಂ. ಡಿವಿಜಿ-1-02376/2007-08, ದಿನಾಂಕ 18.06.2007 ಈ ಎರಡೂ ಪತ್ರಗಳು ನಾವು ದಿನಾಂಕ 11.09.2020 ರಂದು ಮೇಲ್ಕಂಡ ಪತ್ರಗಳನ್ನು ಜೆರಾಕ್ಸ್ ಮಾಡಿಸಲು ವಿದ್ಯಾನಗರದ ಮನೆಯಿಂದ ಜೆರಾಕ್ಸ್ ಅಂಗಡಿಗೆ ಹೋಗುವಾಗ ಮಾರ್ಗ ಮಧ್ಯದಲ್ಲಿ ಎರಡೂ ಒರಿಜಿನಲ್ ಪತ್ರಗಳು ಬೈಕ್‌ನಲ್ಲಿ ಹೋಗುವಾಗ ಬಿದ್ದು ಕಳೆದುಹೋಗಿವೆ. ಇದುವರೆಗೂ ಸದರಿ ಪತ್ರಗಳನ್ನು ನಾವು ಹುಡುಕಿದರೂ ಸಿಕ್ಕಿರುವುದಿಲ್ಲ. ಸದರಿ ಪತ್ರಗಳನ್ನು ನಾವು ಯಾವುದೇ ಸಂಘ, ಸಂಸ್ಥೆಗಳಿಗಾಗಲೀ, ಬ್ಯಾಂಕುಗಳಿಗಾಗಲೀ ಸಲ್ಲಿಸಿರುವುದಿಲ್ಲ. ಈ ಎರಡೂ ಪತ್ರಗಳು ಯಾರಿಗಾದರೂ ಸಿಕ್ಕಲ್ಲಿ ವಿದ್ಯಾನಗರ ಪೊಲೀಸ್ ಸ್ಟೇಷನ್‌ಗಾಗಲೀ ಅಥವಾ ಈ ಕೆಳಗಿನ ಫೋನ್ ನಂಬರ್‌ಗಾಗಲೀ ತಿಳಿಸಬೇಕಾಗಿ ವಿನಂತಿ.

**- ಹೆಚ್. ಗುರುಮೂರ್ತಿ**

**ಮೊ: 97784 28371**

## -: ಸಾರ್ವಜನಿಕ ಪ್ರಕಟಣೆ :-

**ನನ್ನ ಕಕ್ಷಿದಾರರ ಪರವಾಗಿ ಈ ಮೂಲಕ ಸಾರ್ವಜನಿಕರಿಗೆ ತಿಳಿಯ ಪಡಿಸುವುದೇನೆಂದರೆ:**

ನಮ್ಮ ಕಕ್ಷಿದಾರರು ದಾವಣಗೆರೆಯ ಮಾನ್ಯ ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ. 218/2014ರಲ್ಲಿ ಶ್ರೀ ಪಿ.ಕೆ. ರಮೇಶ್ ಬಿನ್ ಲೇಟ್ ಪಿ.ಜಿ. ಕೃಷ್ಣೋಜಿರಾವ್ ಇವರು ಕೆಳಕಂಡ ಷೆಡ್ಯೂಲ್ ಆಸ್ತಿಯನ್ನು ಪಾಲುವಿಭಾಗದ ಮುಖಾಂತರ ಇವರಿಗೆ ಸೇರಿರುತ್ತದೆ. ಸದರಿ ಪಾಲುವಿಭಾಗ ಪತ್ರವು ಎಸ್.ಆರ್. ನಂ.13721/2016-17ರಲ್ಲಿ ನೋಂದಾಯಿತವಾಗಿರುತ್ತದೆ. ಸದರಿ ಷೆಡ್ಯೂಲ್ ಸ್ವತ್ತು ಶ್ರೀ ಪಿ.ಕೆ.ರಮೇಶ್ ಬಿನ್ ಲೇಟ್ ಪಿ.ಜಿ. ಕೃಷ್ಣೋಜಿರಾವ್ ಇವರ ಹಕ್ಕುದಾರಿಕೆ ಮತ್ತು ಸ್ವಾಧೀನಾನುಭವದಲ್ಲಿರತಕ್ಕ ಕೆಳಕಂಡ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರು ಖರೀದಿಸಲು ಉದ್ದೇಶಿಸಿದ್ದು ಇರುತ್ತದೆ. ಷೆಡ್ಯೂಲ್ ಸ್ವತ್ತಿನ ವಿಷಯದಲ್ಲಿ ಯಾರಿಗಾದರೂ, ಯಾವ ವಿಧದಲ್ಲಾದರೂ, ಹಕ್ಕು ಬಾಧ್ಯತೆಗಳಿದ್ದರೆ, ಅವರು ಈ ಪ್ರಕಟಣೆ ಹೊರಡಿಸಿದ ಏಳು(7) ದಿವಸಗಳ ಒಳಗಾಗಿ ದಾಖಲೆ ಸಮೇತ ಕೆಳಕಾಣಿಸಿದ ವಕೀಲರನ್ನು ಭೇಟಿ ಮಾಡತಕ್ಕದ್ದು, ಯಾವುದೇ ತಕರಾರು ಮೇಲೆ ಕಾಣಿಸಿದ ದಿವಸದ ಒಳಗೆ ಬರದಿದ್ದಲ್ಲಿ, ಕೆಳಕಂಡ ಷೆಡ್ಯೂಲ್ ಸ್ವತ್ತಿನ ಮೇಲೆ ಯಾರಿಗೂ ಯಾವ ವಿಧದಿಂದಲೂ ಹಕ್ಕು ಇರುವುದಿಲ್ಲ ಎಂದು ಪರಿಗಣಿಸಿ ನನ್ನ ಕಕ್ಷಿದಾರರು ಮುಂದಿನ ಕ್ರಮವನ್ನು ಕೈಗೊಳ್ಳುವವರಿದ್ದಾರೆ.

**-: ಷೆಡ್ಯೂಲ್ ಸ್ವತ್ತಿನ ವಿವರ :-**

(1) ದಾವಣಗೆರೆ ತಾಲ್ಲೂಕು ಕಸಬಾ ಹೋಬಳಿ, ಕರೂರು ಗ್ರಾಮದ ಸರ್ವೇ ನಂ.11/1ಪಿ ವಿಸ್ತೀರ್ಣ 03ಎಕರೆ ಜಮೀನು ದಿನಾಂಕ: 02.12.1975ರಂದು ಸಣ್ಣ ಕೈಗಾರಿಕಾ ಉದ್ದೇಶಕ್ಕಾಗಿ ಚಿತ್ರದುರ್ಗ ವಿಶೇಷ ಜಿಲ್ಲಾಧಿಕಾರಿಗಳವರಿಂದ ಅವಾರ್ಡ್ ನಂ.ಬಿ.ಡಿ.ಎ. ಎಸ್.ಎ.ಎಲ್.ಎಸ್.ಆರ್, ನಂ.56/7576ರ ಪ್ರಕಾರ ಪರಿವರ್ತನೆಯಾಗಿದ್ದು, ದಾವಣಗೆರೆ ಮಹಾನಗರಪಾಲಿಕೆಯಲ್ಲಿ ಕರೂರು ವಿಭಾಗದಲ್ಲಿ ಬರತಕ್ಕ ಖಾಲಿ ನಿವೇಶನದ ಡೋರ್ ನಂಬರ್ ಸಹ ದಾಖಲಾಗಿದ್ದು, ಡೋರ್ ನಂ.174/4 ವಿಸ್ತೀರ್ಣ ಪೂರ್ವ-ಪಶ್ಚಿಮ: 32.31 ಮೀಟರ್, ಉತ್ತರ-ದಕ್ಷಿಣ: 47.60 ಮೀಟರ್ (32.31x47.60) ವುಳ್ಳ ಖಾಲಿ ನಿವೇಶನಕ್ಕೆ ಚಕ್ಕುಬಂದಿ :

**ಪೂರ್ವಕ್ಕೆ:** ಇದೇ ಸರ್ವೇ ನಂಬರ್ ಪೈಕಿ ಸುನಂದಮ್ಮನ ಜಮೀನು, **ಪಶ್ಚಿಮಕ್ಕೆ:** ಇದೇ ಸೈಟ್ ನಂಬರ್ ಪೈಕಿ ಈ ದಿವಸ ಈ ರಾಜೀ ಸಂಧಾನದ ಮೂಲಕ ಕುರಿತು ಮತ್ತು ಪಿ.ಎನ್.ಗುಡೇಶ್ ಇವರಿಗೆ ಬಂದ ಹಿಸ್ಸೆ, **ಉತ್ತರಕ್ಕೆ:** ಹಳೇ ಪಿ.ಬಿ ರಸ್ತೆ, **ದಕ್ಷಿಣಕ್ಕೆ:** ಪಿ.ಕೆ.ರಮೇಶ್ ಇವರ ಜಾಗ.

**ಟಿ. ನಾಗರಾಜ್**, ವಕೀಲರು,
#195, 'ಶ್ರೀ ವಿಘ್ನೇಶ್ವರ ನಿವಾಸ' 8ನೇ ಅಡ್ಡರಸ್ತೆ,
ಎಸ್.ಎಸ್. ಬಡಾವಣೆ, 'ಎ' ಬ್ಲಾಕ್, ದಾವಣಗೆರೆ, ಮೊ. : 94499 11801


# ಕೃಷಿ ಸಚಿವ ಬಿ.ಸಿ. ಪಾಟೀಲ್ ವಿರುದ್ಧ ರೈತರ ಪ್ರತಿಭಟನೆ



ದಾವಣಗೆರೆ, ಸೆ.14- ರೈತ ಸಂಘದ ಅಧ್ಯಕ್ಷ ಕೋಡಿಹಳ್ಳಿ ಚಂದ್ರಶೇಖರ್ ಬಗ್ಗೆ ಹಗುರವಾಗಿ ಮಾತನಾಡಿರುವುದನ್ನು ಖಂಡಿಸಿ ಕೃಷಿ ಸಚಿವ ಬಿ.ಸಿ. ಪಾಟೀಲ್ ವಿರುದ್ಧ ಕೋಡಿಹಳ್ಳಿ ಚಂದ್ರಶೇಖರ್ ಬಣದ ರಾಜ್ಯ ರೈತ ಸಂಘ ಹಸಿರು ಸೇನೆಯ ಜಿಲ್ಲಾ ಸಮಿತಿ ಪದಾಧಿಕಾರಿಗಳು ನಗರದಲ್ಲಿ ಇಂದು ಪ್ರತಿಭಟನೆ ನಡೆಸಿದರು.

ಜಯದೇವ ವೃತ್ತದಲ್ಲಿ ಜಮಾಯಿಸಿದ್ದ ಪದಾಧಿಕಾರಿಗಳು, ಸಚಿವ ಪಾಟೀಲ್ ಅವರ ಭಾವಚಿತ್ರವುಳ್ಳ ಫ್ಲೆಕ್ಸ್ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೇ ಈ ಸಚಿವರು ವಿಧಾನಸೌಧದಿಂದಲೇ ತೊಲಗಲಿ ಎಂದು ಘೋಷಣೆ ಕೂಗಿದರು.

ಯೂರಿಯಾ ಗೊಬ್ಬರದ ಅಭಾವ ಹಾಗೂ ಕೃಷಿ ಮತ್ತು ತೋಟಗಾರಿಕೆ ವಿದ್ಯಾರ್ಥಿ ಗಳಿಗೆ ಬಿಎಸ್ಸಿ ಅಗ್ರಿ ಪದವಿಯಲ್ಲಿ ಈ ಹಿಂದೆ ಕೃಷಿಕರ ಮಕ್ಕಳಿಗೆ ಇದ್ದ ತಲಾ ಶೇ.40ರ ಕೋಟಾ ತೆಗೆದು ಹಾಕಿದ್ದನ್ನು ಕೋಡಿಹಳ್ಳಿ ಚಂದ್ರಶೇಖರ್ ಪ್ರಶ್ನಿಸಿದ್ದರು. ಇದಕ್ಕೆ ಅವರನ್ನು ಸಚಿವರು ಅವಹೇಳನ ಮಾಡಿದ್ದು ಸರಿಯಲ್ಲ. ನಂಜುಂಡ ಸ್ವಾಮಿ, ಪುಟ್ಟಣ್ಣಯ್ಯ ಮುಂತಾದವರ ಜೊತೆ ಗುರುತಿಸಿಕೊಂಡು ಹೋರಾಟ ನಡೆಸಿ ಯಾವುದೇ ಅಧಿಕಾರದ ಆಸೆ ಇಲ್ಲದ ಕೋಡಿಹಳ್ಳಿ ಚಂದ್ರಶೇಖರ್ ಅವರನ್ನು ಅವಹೇಳನ ಮಾಡಿದ್ದು ಸರಿಯಲ್ಲ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.

ಸಚಿವ ಬಿ.ಸಿ. ಪಾಟೀಲ್ ಅವರು ಬೇಷರತ್ ಕ್ಷಮೆ ಯಾಚಿಸಬೇಕೆಂದು ಆಗ್ರಹಿಸಿದರಲ್ಲದೇ, ಕ್ಷಮೆ ಕೇಳದಿದ್ದರೆ ಜಿಲ್ಲೆಗೆ ಪ್ರವೇಶಿಸುವ ಸಂದರ್ಭದಲ್ಲಿ ಕಪ್ಪು ಪಟ್ಟಿ ಪ್ರದರ್ಶಿಸಲಾಗುವುದು ಎಂದು ಜಿಲ್ಲಾಧ್ಯಕ್ಷ ಮಲ್ಲಶೆಟ್ಟಿಹಳ್ಳಿ ಚನ್ನಬಸಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಚಿನ್ನಸಮುದ್ರ ಶೇಖರನಾಯ್ಕ ಎಚ್ಚರಿಸಿದ್ದಾರೆ.

ಪ್ರತಿಭಟನೆಯಲ್ಲಿ ಹನುಮೇಶಿ, ಶತಕೋಟಿ ಬಸವರಾಜ್, ಮಲ್ಲಶೆಟ್ಟಿಹಳ್ಳಿ ಮಂಜುನಾಥ್, ಬಸವಾಪಟ್ಟಣ ಬಸವರಾಜ್, ಗುರುಸಿದ್ದಾಪುರ ಸಿದ್ದೇಶ್, ದಾಗಿನಕಟ್ಟೆ ಸಂತೋಷ್‌ಕುಮಾರ್, ಬುಳ್ಳಾಪುರ ಶಿವಣ್ಣ, ಕಲೀಂಸಾಬ್, ಕೃಷ್ಣಮೂರ್ತಿ, ದಾಗಿನಕಟ್ಟೆ ಬಸವರಾಜ್, ನಾಗರಾಜ್ ಸೇರಿದಂತೆ ಇತರರು ಪಾಲ್ಗೊಂಡಿದ್ದರು.

# ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 14.09.2020 ರಂದು ಲಿಂಗೈಕ್ಯರಾದ ಹಿರಿಯ ಮುತ್ಸದ್ದಿ, ರಾಜಕೀಯ, ಸಾಮಾಜಿಕ ಮತ್ತು ಧಾರ್ಮಿಕ ಕ್ಷೇತ್ರಗಳಲ್ಲಿ ನಿರಂತರ ಸೇವೆ ಸಲ್ಲಿಸುವ ಮೂಲಕ ನಾಡಿನ ಗಮನ ಸೆಳೆದಿರುವ ಚಿತ್ರದುರ್ಗ ಜಿಲ್ಲಾ ಪರಿಷತ್ ಮಾಜಿ ಸದಸ್ಯರು, ಮಕ್ಕಳ ಕಲ್ಯಾಣ ರಾಜ್ಯ ಪ್ರಶಸ್ತಿ ಪುರಸ್ಕೃತರೂ, ಕುರುಬ ಸಮಾಜದ ಹಿರಿಯರೂ, ನಮ್ಮ ಮಾರ್ಗದರ್ಶಕರೂ ಆದ

**ಮಲೇಬೆನ್ನೂರಿನ ಸನ್ಮಾನ್ಯ ಶ್ರೀ**

## ಡಾ. ಕೆ.ಪಿ. ಸಿದ್ದಬಸಪ್ಪ

**(ಮಾಜಿ ಛೇರ್ಮನ್)**

ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಅರ್ಪಿಸುತ್ತಾ, ಮೃತರ ಅಗಲಿಕೆಯ ದುಃಖ ಭರಿಸುವ ಶಕ್ತಿಯನ್ನು ಭಗವಂತನು ಅವರ ಕುಟುಂಬಕ್ಕೆ ಹಾಗೂ ಅಭಿಮಾನಿಗಳಿಗೆ ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

- **ಶ್ರೀ ರಾಮುಲು,** ಸಚಿವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಖಾತೆ ಹಾಗೂ ಹಿಂದುಳಿದ ವರ್ಗಗಳ ಇಲಾಖೆ, ಕರ್ನಾಟಕ ಸರ್ಕಾರ.
- **ಭೈರತಿ ಬಸವರಾಜ್,** ಸಚಿವರು, ನಗರಾಭಿವೃದ್ಧಿ ಇಲಾಖೆ ಮತ್ತು ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ.
- **ಜಿ.ಎಂ.ಸಿದ್ದೇಶ್ವರ,** ಲೋಕಸಭಾ ಸದಸ್ಯರು ದಾವಣಗೆರೆ.
- **ಗಾಲಿ ಜನಾರ್ದನ ರೆಡ್ಡಿ,** ಮಾಜಿ ಸಚಿವರು, ಬಳ್ಳಾರಿ.
- **ದೇವೇಂದ್ರಪ್ಪ ಕುಣೆಬೆಳಕೆರೆ,** ಕಾರ್ಯದರ್ಶಿ, ರಾಜ್ಯ ಬಿಜೆಪಿ ಯುವ ಮೋರ್ಚಾ.

# ಕೈಲಾಸ ಶಿವಗಣಾರಾಧನೆ ಆಹ್ವಾನ ಪತ್ರಿಕೆ

ಹರಿಹರ ತಾಲ್ಲೂಕು ಬುಳ್ಳಾಪುರ ಗ್ರಾಮದ ವಾಸಿಯಾದ

**ದಿ|| ಗೌಡ್ರ ಮಹೇಶ್ವರಪ್ಪನವರ ಧರ್ಮಪತ್ನಿ ಶ್ರೀಮತಿ ದೇವೀರಮ್ಮನವರ ಮಗನಾದ**



## ಶ್ರೀ ಬಿ. ನಂಜುಂಡಪ್ಪನವರು ಬುಳ್ಳಾಪುರ

(ಪೂಜಾ ವೈನ್ಸ್ ಹಾಗೂ ಕೋಮಲ್ ಸೀಡ್ ಮಾಲೀಕರು)

ದಿನಾಂಕ 11.09.2020ರ ಶುಕ್ರವಾರ ರಾತ್ರಿ 11.40ಕ್ಕೆ ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ

**ಕೈಲಾಸ ಶಿವಗಣಾರಾಧನೆಯನ್ನು**

**ದಿನಾಂಕ 15-09-2020ನೇ ಮಂಗಳವಾರ ಮಧ್ಯಾಹ್ನ 12 ಗಂಟೆಗೆ ಶ್ರೀ ಕೃಷ್ಣ ಕಲಾ ಭವನ, ಎಂ.ಸಿ.ಸಿ. ಎ ಬ್ಲಾಕ್, ದಾವಣಗೆರೆ ಇಲ್ಲಿ**

ಏರ್ಪಡಿಸಿರುತ್ತೇವೆ. ಕಾರಣ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು,

ಮೃತರ ಧರ್ಮಪತ್ನಿ : **ಶ್ರೀಮತಿ ಕೆ.ಜಿ. ರಾಜೇಶ್ವರಿ**
ಮಕ್ಕಳಾದ : **ಕೋಮಲ ಮತ್ತು ಸುನೀಲ್**
ಸಹೋದರರಾದ : **ಬಿ. ಪ್ರಕಾಶ್, ಬಿ. ಸೋಮಶೇಖರ್ ಮತ್ತು ಸಹೋದರಿಯರು ಹಾಗೂ ಗೌಡ್ರ ರುದ್ರಪ್ಪರ ವಂಶಸ್ಥರು, ಬುಳ್ಳಾಪುರ ಹಾಗೂ ಬಂಧುಗಳು.**

# ಭಾವಪೂರ್ಣ ಶ್ರದ್ಧಾಂಜಲಿ



ದಿನಾಂಕ 14-9-2020ರ ಸೋಮವಾರ ಅಕಾಲಿಕ ನಿಧನರಾದ ನಮ್ಮ ಆಸ್ಪತ್ರೆಯ ನರ್ಸಿಂಗ್ ವಿಭಾಗದ ಮುಖ್ಯಸ್ಥರು, ಸಹೃದಯಿಗಳು, ಸ್ನೇಹಜೀವಿ, ಸದಾ ಹಸನ್ಮುಖಿ, ಶ್ರದ್ಧಾವಂತ ಆರೋಗ್ಯ ಕಾರ್ಯಕರ್ತೆಯಾಗಿದ್ದ

## ಶ್ರೀಮತಿ ಚಂದ್ರಮ್ಮ ಯು.ಎಂ

ಅವರಿಗೆ ನಮ್ಮೆಲ್ಲರ ಭಾವಪೂರ್ಣ ಶ್ರದ್ಧಾಂಜಲಿ. ಭಗವಂತನು ಅವರ ಆತ್ಮಕ್ಕೆ ಚಿರಶಾಂತಿ ನೀಡಲಿ ಹಾಗೂ ಅವರ ಅಗಲಿಕೆಯ ದು:ಖ ಭರಿಸುವ ಶಕ್ತಿ ಅವರ ಕುಟುಂಬ ವರ್ಗಕ್ಕೆ ನೀಡಲಿ ಎಂದು ಪ್ರಾರ್ಥಿಸುತ್ತೇವೆ.

**ಡಾ|| ಹೆಚ್.ಎಲ್.ಸುಬ್ಬರಾವ್,** ಮ್ಯಾನೇಜಿಂಗ್ ಡೈರೆಕ್ಟರ್

ವೈದ್ಯವೃಂದ ಹಾಗೂ ಸಿಬ್ಬಂದಿ ವರ್ಗ

**ಸಿಟಿ ಸೆಂಟ್ರಲ್ ಹಾಸ್ಪಿಟಲ್ ಪ್ರೈವೇಟ್ ಲಿಮಿಟೆಡ್, ದಾವಣಗೆರೆ**

JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte